**ಶ್ರೀ ಹೆಚ್.ಕೆ.ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) ಶ್ರಿ ಆರ್.ವಿ. ದೇಶಪಾಂಡೆ(ಸಹಕಾರ ಸಚಿವರು) ಅವರ ಪರವಾಗಿ: ಮಾನ್ಯ ಅಧ್ಯಕ್ಷರೇ,**

**1997 ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮದ ಕಲಂ 71(1) ರ ಪ್ರಕರಣದ ಮೇರೆಗೆ:**

1997ರ ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳನ್ನು ಹೊಸದಾಗಿ ರಚಿಸಿ ಅಧ್ಯಾಯ–1 ರಿಂದ 8 ರವರೆಗೆ ತಿದ್ದುಪಡಿ ಮಾಡಿ ದಿನಾಂಕ:7.12.2004 ರಂದು ಹೊರಡಿಸಲಾದ ಸಿಎಂಡಬ್ಲ್ಯೂ:57:ಸಿಎಲ್ಎಂ:2004ನೇ ಸಂಖ್ಯೆಯ ಅಧಿಸೂಚನೆಯನ್ನು ಮಂಡಿಸುತ್ತೇನೆ.

**ಶ್ರೀ ಹೆಚ್.ಕೆ. ಪಾಟೀಲ್(ಕಾನೂನು ಸಚಿವರು)**–ಮಾನ್ಯ ಅಧ್ಯಕ್ಷರೇ,

**1987 ಕರ್ನಾಟಕ ಕಾನೂನು ಸೇವಾ ಪ್ರಾಧಿಕಾರದ ಅಧಿನಿಯಮದ ಕಲಂ 28(2) ಪ್ರಕರಣದ ಮೇರೆಗೆ:**

1986 ರ ಕರ್ನಾಟಕ ಕಾನೂನು ಸೇವಾ ಪ್ರಾಧಿಕಾರದ (ಅಧಿನಿಯಮ) ನಿಯಮ 6ಕ್ಕೆ ತಿದ್ದುಪಡಿ ಮಾಡಿ ದಿನಾಂಕ:04.03.2005ರಂದು ಹೊರಡಿಸಲಾದ ಲಾ:10:ಎಲ್ಎಡಿ:2004ನೇ ಸಂಖ್ಯೆಯ ಅಧಿಸೂಚನೆಯನ್ನು ಮಂಡಿಸುತ್ತೇನೆ.

**ಅಧ್ಯಕ್ಷರು:** ಎಲ್ಲಾ ಕಾಗದ ಪತ್ರಗಳನ್ನು ಮಂಡಿಸಲಾಯಿತು.

**3. ನಿಲುವಳಿ ಸೂಚನೆ ಮಂಡಿಸಲು ಅನುಮತಿ ಕೋರಿಕೆ**

**ವಿಷಯ:** ಕುಡಿಯುವ ನೀರಿಗೆ ಸಂಬಂಧಿಸಿದಂತೆ ಶಾಸಕರ ಅಧ್ಯಕ್ಷತೆಯಲ್ಲಿರುವ ಟಾಸ್ಕ್ಫೋರ್ಸ್ ಕಾಲಾವಧಿಯನ್ನು ವಿಸ್ತರಿಸುವ ಬಗ್ಗೆ.

**ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು):** ಮಾನ್ಯ ಅಧ್ಯಕ್ಷರೆ, 224 ಶಾಸಕರಿಗೆ ಸಂಬಂಧಿಸಿದ ಒಂದು ಪ್ರಮುಖವಾದ ನಿಲುವಳಿ ಸೂಚನೆಯನ್ನು ಮಂಡಿಸುತ್ತಿದ್ದೇನೆ. ರಾಜ್ಯದಲ್ಲಿ ಕುಡಿಯುವ ನೀರಿನ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿದ್ದ ಟಾಸ್ಕ್ಫೋರ್ಸ್ ಸಮಿತಿಯ ಅವಧಿಯು ಮುಗಿದಿದ್ದು, ಇನ್ನು ಬಹುತೇಕ ಕಡೆ ಮಳೆ ಬರದೆ ಕುಡಿಯುವ ನೀರಿನ ಹಾಹಾಕಾರವಿದ್ದು ಹಾಗೂ ಇಡೀ ವ್ಯವಸ್ಥೆಯನ್ನು ಕಾಯಂ ಆಗಿ ಮುಂದುವರೆಸಿ ಹಣ ಬಿಡುಗಡೆ ಮಾಡುವ ಬಗ್ಗೆ ಮತ್ತು ಇದರೊಳಗೆ ಈಗಾಗಲೇ ಕೊರೆದಿರುವ ಕೊಳವೆಬಾವಿಗಳ ಬಾಕಿ ಹಾಗೂ ಪಂಪು, ಕೈಪಂಪು ಇಂತಹ ಸಾಮಗ್ರಿಗಳ ಬಾಕಿ ಹಣವನ್ನು ತಕ್ಷಣ ಬಿಡುಗಡೆ ಮಾಡುವಂತೆ

ಸರ್ಕಾರವನ್ನು ಒತ್ತಾಯಿಸಿ ಈ ನಿಲುವಳಿ ಸೂಚನೆಯನ್ನು ತರುತ್ತಿದ್ದೇನೆ. ಇದು ಬಹಳ ಸರಳವಾಗಿದೆ. ತಾವು ದೊಡ್ಡ ಮನಸ್ಸು ಮಾಡಿ ಶಾಸಕರ ಅಧ್ಯಕ್ಷತೆಯಲ್ಲಿ ಕುಡಿಯುವ ನೀರಿಗಾಗಿ ಟಾಸ್ಕ್‌ಫೋರ್ಸ್‌ನ್ನು ರಚನೆ ಮಾಡಿದ್ದೀರಿ. ಅದರ ಅವಧಿ ದಿನಾಂಕ:30–06–2005ಕ್ಕೆ ಮುಗಿಯುತ್ತಿದೆ. ಮಾನ್ಯ ಮುಖ್ಯಮಂತ್ರಿಗಳೇ ಇವತ್ತು ಎಂಎಲ್‌ಎ ಅಧ್ಯಕ್ಷತೆಯಲ್ಲಿ ಟಾಸ್ಕ್‌ಫೋರ್ಸ್ ರಚನೆ ಮಾಡಿದಾಗ ಬಹುಶಃ ಎಲ್ಲರ ಅನುಭವದಲ್ಲಿ ಸ್ಥಳ ಪರಿಶೀಲನೆ ಮಾಡಿ ಅವತ್ತು ಅವತ್ತಿನಲ್ಲಿ ಇದ್ದಂತಹ ಸಮಸ್ಯೆಯನ್ನು ಬರಗಾಲದ ಸಮಯದಲ್ಲಿ ಆ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಿ, ಅಲ್ಲಿ ಬೋರ್‌ವೆಲ್ ತೆಗೆಯುವುದಿರಬಹುದು, ರಿಪೇರಿಮಾಡುವುದಿರಬಹುದು ಬೇರೆ ಬೇರೆ ಕುಡಿಯುವ ನೀರಿನ ಯೋಜನೆ ಇರಬಹುದು, ಬಹಳ ವ್ಯವಸ್ಥಿತವಾಗಿ ಎಲ್ಲಾ ಶಾಸಕರು ಮಾಡಿಕೊಂಡು ಬಂದರು. ಯಾವುದೇ ನ್ಯೂನತೆಗಳು ಅಲ್ಲಿ ಕಂಡು ಬರಲಿಲ್ಲ. ಇವತ್ತು ಅನೇಕ ಕಡೆ ಕೆಲಸ ಮಾಡಿರುವುದಕ್ಕೆ ಹಣ ಬಿಡುಗಡೆಯಾಗಿಲ್ಲ. ಶಾಸಕರ ಅಧ್ಯಕ್ಷತೆಯಲ್ಲಿ ಒಂದೊಂದು ಕ್ಷೇತ್ರದಲ್ಲಿ ಲಕ್ಷಾಂತರ ಖರ್ಚು ಮಾಡಿ ಎಲ್ಲೆಲ್ಲಿ ಬೊರ್‌ವೆಲ್ ತೆಗೆಸಿ ಕೆಲಸ ಮಾಡಿಸಿದ್ದೇವೆ. ಅದಕ್ಕೆ ಅನೇಕ ಕಡೆ ಹಣ ಬಿಡುಗಡೆಯಾಗಿಲ್ಲ. ಆ ಹಣವನ್ನು ಬಿಡುಗಡೆ ಮಾಡಬೆಕು, ಬಹಳ ಮುಖ್ಯವಾಗಿ ಮುಖ್ಯಮಂತ್ರಿಗಳು ಈ ಟಾಸ್ಕ್ ಫೋರ್ಸ್ ಅವಧಿ ಏನು ದಿನಾಂಕ:30–06–2005ಕ್ಕೆ ಮುಗಿಯುತ್ತಿದೆ ಅದನ್ನು ಮುಂದುವರೆಸಬೇಕು. ಏಕೆಂದರೆ ಆಥಣಿಯ ನಮ್ಮ ಶಾಸಕರು ಬಂದಿದ್ದರು. ಇವತ್ತು ಸಹ ಅಲ್ಲಿಗೆ ಜುಲೈ ತಿಂಗಳಲ್ಲಿ ಕುಡಿಯುವ ನೀರಿನ ಟ್ಯಾಂಕರ್‌ಗಳನ್ನು ನಾವು ಕೊಡುತ್ತಿದ್ದೇವೆ. ಗುಲ್ಬರ್ಗಾದಲ್ಲಿ ಮಳೆಯೇ ಆಗಿಲ್ಲವೆನ್ನುವ ವರದಿ ಇದೆ. ಅನೇಕ ಕಡೆ ಕುಡಿಯುವ ನೀರಿನ ಸಮಸ್ಯೆ ಇದೆ. ಅದಕ್ಕೆ ನಾನು ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡುವುದೇನೆಂದರೆ, ಟಾಸ್ಕ್‌ಫೋರ್ಸ್ ಬಹಳ ಉಪಯುಕ್ತವಾಗಿದೆ, ಮತ್ತೆ ವಿದ್ಯುತ್ ಸಂಪರ್ಕ ಸಿಗದಿದ್ದಾಗ ಕೆಪಿಟಿಸಿಎಲ್ ಅಧಿಕಾರಿಗಳನ್ನು ಸ್ಥಳಕ್ಕೆ ಕರೆಯಿಸಿ ತಕ್ಷಣ ವ್ಯವಸ್ಥೆ ಮಾಡಿಸುವುದರಲ್ಲಿ ಯಶಸ್ವಿಯಾಗಿದ್ದೇವೆ. ಈ ಎಲ್ಲಾ ಹಿನ್ನೆಲೆಯಲ್ಲಿ ನಿಮ್ಮಲ್ಲಿ ಎರಡು ಮೂರು ಒತ್ತಾಯ ಇದೆ. ಒಂದು ಈ ಟಾಸ್ಕ್‌ಫೋರ್ಸ್ ಅನ್ನು ಮುಂದುವರೆಸಿ ಬಾಕಿ ಹಣವನ್ನು ಬಿಡುಗಡೆ ಮಾಡಿ, ಮತ್ತೆ ಈ ಬರಗಾಲಕ್ಕೆ ಸಂಬಂಧಪಟ್ಟಂತೆ ನೀರಿನ ಅಭಾವವಿರುವ ಕಡೆ ಮತ್ತೆ ಅದನ್ನು ಮುಂದುವರೆಸುವುದಕ್ಕೆ ಅನುಕೂಲವಾಗುತ್ತದೆ. ಬೇರೆ ನಾವೇನು ಕೇಳುತ್ತಿಲ್ಲ.

ಬಹುಶಃ ಈ ಶಾಸನ ಸಭೆ ಅಸ್ಥಿತ್ವಕ್ಕೆ ಬಂದ ಮೇಲೆ ಶಾಸಕರಿಗೆ ಏನಾದರೂ ಅಧಿಕಾರವನ್ನು ಕೊಟ್ಟಿದ್ದರೆ, ಈ ಟಾಸ್ಕ್ ಫೋರ್ಸ್ ಬಿಟ್ಟರೆ ಮತ್ತೇನೂ ಮಾಡಿಲ್ಲ. ಒಂದು ರೀತಿ ಬೇರೆ ಸಮಿತಿಗಳನ್ನು ಯಾವಾಗ ಮಾಡುತ್ತಿರಿ, ಅದನ್ನು ಬೇರೆ ಸಮಯದಲ್ಲಿ ಚರ್ಚೆ ಮಾಡೋಣ. ಈಗ ನೇರವಾಗಿ ಮುಖ್ಯಮಂತ್ರಿಗಳಿಗೆ ಒತ್ತಾಯ ಮಾಡುವುದೇನೆಂದರೆ ಟಾಸ್ಕ್ ಫೋರ್ಸ್‌ನ್ನು ಮುಂದುವರೆಸಬೇಕು, ಬಾಕಿ ಹಣವನ್ನು ಪಾವತಿ ಮಾಡಬೇಕು, ಇನ್ನು ಹೆಚ್ಚು ಒಳ್ಳೆಯ ರೀತಿಯಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಇದರ ಮಹತ್ವವನ್ನು ಸರ್ಕಾರದ ಗಮನಕ್ಕೆ ತರಬೇಕೆಂದು ನಾನು ನಿಲುವಳಿ ಸೂಚನೆಯ ಮೂಲಕ ಪ್ರಸ್ತಾಪ ಮಾಡಿದ್ದೇನೆ. ನಮ್ಮ ವಿರೋಧ ಪಕ್ಷದ ಎಲ್ಲಾ ಶಾಸಕರು ಇದಕ್ಕೆ ಸಹಿ ಮಾಡಿದ್ದಾರೆ. ಬಹುಶಃ ಆಡಳಿತ ಪಕ್ಷ, ವಿರೋಧ ಪಕ್ಷದವರು ಎನ್ನುವ ಪ್ರಶ್ನೆ ಇಲ್ಲ. ಎಲ್ಲರದೂ ಒಂದೇ ಗುರಿ ಇದೆ. ದಯಮಾಡಿ ಈ ಟಾಸ್ಕ್ ಫೋರ್ಸನ್ನು ಮುಂದುವರೆಸಿ. ಬಾಕಿ ಹಣವನ್ನು ಪಾವತಿ ಮಾಡಿ ಇನ್ನು ಒಳ್ಳೆಯ ರೀತಿಯಲ್ಲಿ ಕೆಲಸ ಮಾಡುವುದಕ್ಕೆ ಈ ಟಾಸ್ಕ್ ಫೋರ್ಸ್‌ಗೆ ಅವಕಾಶ ಮಾಡಿ ಕೊಡಬೇಕೆನ್ನುವಂತಹ ವಿನಂತಿಯನ್ನು ಮಾಡುತ್ತೀದ್ದೇನೆ. ಜಿಲ್ಲಾ ಪಂಚಾಯತಿ ಈಗಾಗಲೇ ತಾಲ್ಲೂಕು ಪಂಚಾಯತಿಗಳ ಅವಧಿ ಮುಗಿದಿರುವುದರಿಂದ ಅಲ್ಲಿ ಆಡಳಿತಾಧಿಕಾರಿಯನ್ನು ನೇಮಕ ಮಾಡುತ್ತಿರುವ ಸಂದರ್ಭದಲ್ಲಿ ಬಹಳ ಮಹತ್ವವಾಗಿ ಇದು ಆಗಬೇಕಾಗಿದೆ. ಆದ್ದರಿಂದ ದಯಮಾಡಿ ಅವಕಾಶವನ್ನು ಮಾಡಿಕೊಡಬೇಕು.

**ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ):** ಇಲ್ಲಿ ಟಾಸ್ಕ್ ಫೋರ್ಸ್ ಆಗದ ಪರಿಣಾಮವಾಗಿ ಕನಿಷ್ಟ ಈ ಬೇಸಿಗೆ ಕಾಲದಲ್ಲಿ ಎಲ್ಲಾ ತಾಲ್ಲೂಕಿನಲ್ಲೂ ಅಲ್ಪ ಸ್ವಲ್ಪ ನೀರಿನ ಹಾಹಾಕಾರವನ್ನು ನಾವು ತಪ್ಪಿಸಿದ್ದೇವೆಂದು ಹೇಳುವುದಕ್ಕೆ ನಿಜವಾಗಿಯೂ ಶಾಸಕರಾಗಿ ನಮಗೆಲ್ಲಾ ಹರ್ಷವಾಗುತ್ತದೆ. ಆದರೆ ದುರಂತವೇನಾಗಿದೆ ಎಂದರೆ ನಾವೇನು ಟಾಸ್ಕ್ ಫೋರ್ಸ್‌ನಲ್ಲಿ ಕುಳಿತು ಗುರುತಿಸಿಬಿಟ್ಟು ಕೊರೆಯಿಸಿದ್ದೇವೆ ಆ ಹಣವನ್ನು ಕೂಡ ಇನ್ನೂ ಬಿಡುಗಡೆ ಮಾಡಿಲ್ಲ. ಇನ್ನೊಂದು ಕಡೆ ಸ್ಕೇರ್‌ಸಿಟಿ ಇರುವ ತಾಲ್ಲೂಕುಗಳಲ್ಲಿ ಡೀಪನಿಂಗ್ ಮಾಡಿದ್ದೇವೆ ಅಥವಾ ಮೆಟಿರಿಯಲ್‌ಗೆ ಹಣ ಕೊಡಿ ಎಂದು ಕೇಳಿದ್ದೇವೆ, ಆ ಹಣ ಕೂಡ ವಿತರಣೆಯಾಗಿಲ್ಲ. ಈ ಮಧ್ಯೆ ನಮ್ಮ ಅವಧಿ ಮುಗಿದಿದೆ. ಸತ್ಯ ಜೂನ್ ಅಥವಾ ಜುಲೈ ತಿಂಗಳಲ್ಲಿ ಮಳೆ ಬರುತ್ತದೆಂದು ನಾವೆಲ್ಲಾ ನಿರೀಕ್ಷೆ

ಮಾಡಿದ್ದೆವು. ಮತ್ತು ಇದೆಂದು ಶಾಶ್ವತ ಸಮಿತಿಯಾಗಬೇಕೆಂದು ನಾವ್ಯಾರು ಒತ್ತಾಯ ಮಾಡಿರಲಿಲ್ಲ. ಇವತ್ತು ಪರಿಸ್ಥಿತಿ ಹೇಗಿದೆ ಎಂದರೆ ಇಡೀ ವ್ಯವಸ್ಥೆ ಮತ್ತೆ ಗ್ರಾಮ ಪಂಚಾಯತಿಯ ಅಧೀನಕ್ಕೆ ಅದರ ಅವಧಿ ಮುಗಿದಿರುವುದರಿಂದ ಹೋಗಬೇಕಾಗುತ್ತದೆ. ಒಂದು ಕಡೆ ಮಾಡಿರುವ ಕೆಲಸಕ್ಕೆ ಪೇಮೆಂಟ್ ಆಗಿಲ್ಲ. ಒಂದೊಂದು ಗ್ರಾಮ ಪಂಚಾಯತಿಯಲ್ಲಿ ಹತ್ತು ಲಕ್ಷ ಇಪ್ಪತ್ತು ಲಕ್ಷ ಇಪ್ಪತ್ತೈದು ಲಕ್ಷಕ್ಕಿಂತ ಮೀರಿ ಕೆಲಸವನ್ನು ಮಾಡಿಸಿರುತ್ತಾರೆ. ಇನ್ನೊಂದು ಗ್ರಾಮ ಪಂಚಾಯತಿಗಳಲ್ಲಿ ಕೆಲಸಗಳು ಆಗಿರುವುದೇ ಇಲ್ಲ. ಅವರು ಪೇಮೆಂಟ್ ಮಾಡುವುದಕ್ಕಾಗುವುದಿಲ್ಲ. ಎರಡನೆಯದಾಗಿ ಯಾವುದೇ ಗ್ರಾಮ ಪಂಚಾಯತಿಯಲ್ಲಿ ಇಷ್ಟೇ ಬೋರ್ ಹಾಕಬೇಕು, ಇಷ್ಟೇ ಕಡೆ ನಾವು ಸ್ಕೀಂಗಳಿಗೆ ಬೋರ್ ಕೊರೆದು ಕನೆಕ್ಷನ್ ಕೊಡಬೇಕೆಂದು ತೀರ್ಮಾನ ಮಾಡುವ ಸ್ಥಿತಿಯಲ್ಲಿ ನಾವು ಇವತ್ತು ಇಲ್ಲ. ದಯಮಾಡಿ ಇವತ್ತೇನು ಟಾಸ್ಕ್‌ಫೋರ್ಸ್ ಸಮಿತಿ ಅಸ್ಥಿತ್ವದಲ್ಲಿದೆ, ಸನ್ಮಾನ್ಯ ಮುಖ್ಯಮಂತ್ರಿಗಳನ್ನು, ಸರ್ಕಾರವನ್ನು ಇದನ್ನು ಮುಂದುವರೆಸಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಈಗ ಯಾವ್ಯಾವ ಜಿಲ್ಲೆಯಲ್ಲಿ ಹಣ ಬಿಡುಗಡೆ ಮಾಡಿಲ್ಲ, ಮುಖ್ಯ ಕಾರ್ಯದರ್ಶಿಯವರಿಂದಾಗಲಿ ಅಥವಾ ಡಿ.ಸಿ.ಯವರ ವತಿಯಿಂದಾಗಲಿ ಆ ಪೆಂಡಿಂಗ್ ಇರುವ ಹಣವನ್ನೆಲ್ಲಾ ಬಿಡುಗಡೆ ಮಾಡಬೇಕು, ಏಕೆಂದರೆ, ಇಲ್ಲಿ ಶಾಸನ ಸಭೆಯಲ್ಲಿ ಅವರು ಮಾತು ಕೊಟ್ಟಿದ್ದಾರೆ. ಎಷ್ಟೇ ಹಣವಿದ್ದರೂ ನಾವು ಕೊಡುತ್ತೇವೆ, ಶಾಸಕರು ಅದಕ್ಕೆ ಆತಂಕ ಪಡಬಾರದು ಎಂದು ಹೇಳಿದ್ದು ನಾವು ಅಲ್ಲಿ ಕುಳಿತುಕೊಂಡು ಸರ್ಕಾರ ಮಾತು ಕೊಟ್ಟಿದೆ ನಿಮ್ಮ ಮಟ್ಟಿಗೆ ನೀವು ಕೊಳವೆ ಬಾವಿಯನ್ನು ಮಾಡಿಕೊಂಡು ಹೋಗಿ ಕನೆಕ್ಷನ್ ಕೊಡಿ ಎಂದು, ಮೂರನೆಯದಾಗಿ ಕೆಇಬಿಯದ್ದು ಗ್ರಾಮ ಪಂಚಾಯತಿಯವರು ತಕ್ಷಣ ಕೆ.ಇ.ಬಿಯವರಿಂದ ಸಪ್ಲೈ ತೆಗೆದು ಕೊಳ್ಳುವುದಕ್ಕಾಗುತ್ತಿಲ್ಲ. ಇವತ್ತೇನು ಟಾಸ್ಕ್‌ಫೋರ್ಸ್‌ಗೆ ಏನು ಅಧಿಕಾರವನ್ನು ಕೊಡಲಾಗಿದೆ ಅದನ್ನು ನಾವು ಉಪಯೋಗ ಮಾಡಿಕೊಂಡು ಕೆಇಬಿಗೆ ಹೇಳಿ ಎಲ್ಲೆಲ್ಲಿ ತ್ವರಿತವಾಗಿ ನೀರನ್ನು ವಿದ್ಯುತ್ ಸಂಪರ್ಕ ಕೊಟ್ಟು ಸರಬರಾಜು ಮಾಡುವುದಕ್ಕಾಗುತ್ತಿದೆ ಅದನ್ನು ಮಾಡಬೇಕು. ಮಾನ್ಯ ಯಡಿಯೂರಪ್ಪನವರು ಹೇಳಿದ ಮಾತನ್ನು ನಾನು ಅನುಮೋದನೆ ಮಾಡುತ್ತೇನೆ. ಶಾಸಕರಾಗಿ ನಾವು ಏನಾದರೂ ಮಾನಮರ್ಯಾದೆಯಿಂದ ಗ್ರಾಮೀಣ ಪ್ರದೇಶದಲ್ಲಿದ್ದೇವೆಂದರೆ, ಸ್ವಲ್ಪ ನೀರಿನ ಸಮಸ್ಯೆಯನ್ನು ನಿಭಾಯಿಸಿದ್ದಕ್ಕಾಗಿ ಎಂದು ನಾನು ಹೇಳುತ್ತಿದ್ದೇನೆ.

ದಯಮಾಡಿ, ಇದನ್ನು ಕಿತ್ತುಹಾಕಬಾರದು, ಇದನ್ನು ಮುಂದುವರೆಸಬೇಕು. ಈ ಸಮಿತಿಯ ಅಧ್ಯಕ್ಷರು ಹಾಗೆಯೇ ಮುಂದುವರೆಯಬೇಕು, ಬೇಕಾದರೆ ಗ್ರಾಮ ಪಂಚಾಯತಿಯ ಅಧ್ಯಕ್ಷರುಗಳೆಲ್ಲಾ ಬಂದ ಮೇಲೆ ನಾವು ಹಣ ಕೊಡುತ್ತೇವೆಂದು ಹೇಳಿದರೆ ತಕ್ಷಣ ಮಾಡುವ ಸ್ಥಿತಿಯಲ್ಲಿ ಸರ್ಕಾರವಿಲ್ಲ. ಇದರ ಜೊತೆಗೆ ತಾಲ್ಲೂಕು ಪಂಚಾಯತಿ ಅಸ್ಥಿತ್ವದಲ್ಲಿಲ್ಲ, ಜಿಲ್ಲಾ ಪಂಚಾಯತಿ ಅಸ್ಥಿತ್ವದಲ್ಲಿಲ್ಲ. ಮೂರನೆಯದಾಗಿ ಇವರು ಒಂದು ನಿರ್ಧಾರವನ್ನು ತೆಗೆದುಕೊಂಡಿದ್ದಾರೆ ಏನೆಂದರೆ ಇಂಜಿನಿಯರಿಂಗ್ ಇಲಾಖೆ ಕೂಡ ಜಿಲ್ಲಾ ಪರಿಷತ್‌ನಲ್ಲಿ ಉಳಿಯುವುದಿಲ್ಲ. ಇವರು ಎಲ್ಲಾ ಸೆಕ್ಷನ್ ಆಫೀಸ್‌ಗಳನ್ನು ಮಾಡಿ ಎರಡೆರಡು ಮೂರು ಮೂರು ಪಂಚಾಯತಿಗಳಿಗೊಬ್ಬ ಇಂಜಿನಿಯರ್ ಅನ್ನು ವರ್ಗಾವಣೆ ಮಾಡಿ ಅವರು ಅಲ್ಲಿಗೆ ಸೀಮಿತವಾದವರು ಎಂದು ಹೇಳಿಬಿಟ್ಟಿದ್ದಾರೆ. ನೀರಿನ ಬಗ್ಗೆ ಕುಳಿತು ಸಮಗ್ರವಾಗಿ ಪರಿಶೀಲನೆ ಮಾಡಿ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡುವುದಕ್ಕಾಗುವುದೇ ಇಲ್ಲವೆನ್ನುವ ಪರಿಸ್ಥಿತಿ ನಿರ್ಮಾಣವಾಗಿರುವಾಗ ಶಾಸಕರನ್ನು ಮುಂದುವರೆಸಬೇಕು. ಈಗ ಆಗಿರುವ ಕೆಲಸಕ್ಕೆ ಹಣವನ್ನು ಕೊಡಬೇಕು ಮತ್ತು ಮುಂದೆಯೂ ಕೂಡ ನಮಗೆ ಬೇಕಾದಷ್ಟು ಹಣವನ್ನು ಮೀಸಲಿಡಬೇಕಾಗಿದೆ. ನಾವು ಬಹಳ ಕೆಟ್ಟ ಪರಿಸ್ಥಿತಿಗೆ ಹೋಗಿದ್ದೇವೆ, ಟ್ಯಾಂಕರ್‌ಗಳಲ್ಲಿ ನೀರನ್ನು ಕೊಡುತ್ತಿದ್ದೇವೆ, ಒಂದೊಂದು ಸ್ಥಳದಲ್ಲಿ ಎರಡು ಮೂರು ನಾಲ್ಕು ಬೋರ್‌ವೆಲ್‌ಗಳನ್ನು ತೆಗೆದರೂ ನೀರು ಸಿಗುತ್ತಿಲ್ಲ. 700–800 ಅಡಿಗಳಷ್ಟು ಬೋರ್‌ವೆಲ್ ತೆಗೆಯುವ ಸ್ಥಿತಿ ಇವತ್ತು ಆಗಿರುವುದರಿಂದ ದಯಮಾಡಿ ಕನಿಷ್ಟ ಸೌಲಭ್ಯವಾದ ನೀರನ್ನಾದರೂ ಗ್ರಾಮೀಣ ಹಾಗೂ ಸಣ್ಣ ಪುಟ್ಟ ಪಟ್ಟಣ ಪ್ರದೇಶಗಳಿಗೆ ಕೊಡುವುದಕ್ಕೆ ಸರ್ಕಾರದವರು ಅನುವು ಮಾಡಿಕೊಡಬೇಕು, ಈ ಸಮಿತಿಯನ್ನು ಮುಂದುವರೆಸಬೇಕೆಂದು ನಾನು ಕೇಳುತ್ತಿದ್ದೇನೆ.

**ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):** ಮಾನ್ಯ ಅಧ್ಯಕ್ಷರೆ, ಹಿಂದಿನ ಸಭೆಯಲ್ಲಿ ಸರ್ಕಾರದ ಗಮನಕ್ಕೆ ತಂದಾಗ ಒಂದು ಟಾಸ್ಕ್‌ಫೋರ್ಸ್ ಸಮಿತಿಯನ್ನು ಮಾಡಿ ಇದೇ ಸದನದಲ್ಲಿ ಹಣಕಾಸು ಸಚಿವರು ಹಾಗೂ ಸಂಬಂಧಪಟ್ಟ ಸಚಿವರು ಎಷ್ಟೇ ಹಣ ಬೇಕಾದರೂ ಅದಕ್ಕೆ ಹಿಂದೆ ಮುಂದೆ ನೋಡತಕ್ಕಂಥದ್ದಲ್ಲ ಕೊಡುತ್ತೇವೆಂದು ಹೇಳಿದರು. ಜೊತೆಗೆ ಇದನ್ನು ವ್ಯವಸ್ಥೆ ಮಾಡುವ ಅಧಿಕಾರಿಗಳು ಕೂಡ ಎಷ್ಟು ಬೇಕಾದರೂ ಹಣವನ್ನು

ಕೊಡುತ್ತೇವೆಂದು ಹೇಳಿದರು. ನಮ್ಮ ಟಾಸ್ಕ್‌ಫೋರ್ಸ್ ಅವಧಿ ಈ ಜೂನ್ 30, 2005ಕ್ಕೆ ಮುಗಿದು ಹೋಯಿತು. ಈಗ ಏನಾಗಿದೆ ಎಂದರೆ ಕೆಲವು ಕಡೆ ಕೊಳವೆ ಹಾಕಿದ್ದೇವೆ, ಕೆಲವು ಬೊರ್ ತೆಗೆಸಿದ್ದೇವೆ, ಎಲ್ಲಾ ಕಡೆ ಅರ್ಧಂಬರ್ಧ ಕೆಲಸವಾಗಿ ನಿಂತು ಹೋಗಿದೆ. ತಮಗೆ ಹೇಳಬೇಕೆಂದರೆ, ಪ್ರತಿ ಕ್ಷೇತ್ರದಲ್ಲೂ ನೂರಕ್ಕೆ ತೊಂಭತ್ತು ಭಾಗದಷ್ಟು ಒಂದು ರೀತಿಯಲ್ಲಿ ಸಾಲದಲ್ಲಿ ಕೊರೆಯಿಸಿದ್ದೇವೆ. ಎಲ್ಲಾ ಕಡೆ ಸಾಲ ಇದ್ದು ಹಣ ಬಂದಿಲ್ಲ. ಬೋರ್ ತೆಗೆಯುವವನಿಗೆ ಸಾಲವನ್ನು ಹೇಳಿದ್ದೇವೆ, ಟಾಸ್ಕ್‌ಫೋರ್ಸ್ ಅಧ್ಯಕ್ಷರು ಇಂಜಿನಿಯರ್‌ಗೆ ನೀವು ತೆಗೆಯಿರಿ ನಾವು ಇದ್ದೇವೆಂದು ಹೇಳಬೇಕು. ನಮಗೆ ತಕ್ಷಣಕ್ಕೆ ತುರ್ತಾಗಿ ನೀರು ಬೇಕು, ನನ್ನ ಒಂದೇ ಕ್ಷೇತ್ರದಲ್ಲಿ 1200 ಕೊಳವೆ ಬಾವಿಗಳು ಕೆಟ್ಟಿವೆ, ಮತ್ತು ಇಡೀ ರಾಜ್ಯದಲ್ಲಿ 90,000 ಕೊಳವೆ ಬಾವಿಗಳು ಕೆಟ್ಟಿವೆ, ನೀವು ಇದಕ್ಕೆ ಸರಿಯಾಗಿ ಕೊಳವೆಬಾವಿಗಳನ್ನು ಕೊಟ್ಟು ನೀರನ್ನು ಕೊಡಲಿಲ್ಲವೆಂದರೆ ಪರಿಸ್ಥಿತಿ ಹದಗೆಡುತ್ತದೆ. ಆದ್ದರಿಂದ ಖಾಯಂ ಆಗಿ ಈ ಟಾಸ್ಕ್‌ಫೋರ್ಸ್ ಸಮಿತಿಯನ್ನು ಮಂದುವರೆಸಬೇಕು. ಜೊತೆಗೆ ಹಣವನ್ನು ಬಿಡುಗಡೆ ಮಾಡಬೇಕು. ಇವರು ನೂರಕ್ಕೆ ತೊಂಭತ್ತು ಭಾಗದಷ್ಟು ಹಣ ಬಿಡುಗಡೆ ಮಾಡಿಲ್ಲ, ನಾನು ಅಧಿಕಾರಿಗಳನ್ನು ಆಕ್ಷೇಪಣೆ ಮಾಡುತ್ತಿಲ್ಲ, ಮಂತ್ರಿಗಳನ್ನು ಆಕ್ಷೇಪಣೆ ಮಾಡುತ್ತಿಲ್ಲ ನಮಗೆ ಕಾರ್ಯವಾಗಬೇಕು ಆದರೆ ಕಾರ್ಯವಾಗುತ್ತಿಲ್ಲ. ಆದ್ದರಿಂದ ತಕ್ಷಣದಿಂದ ಈ ಸದನದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಭರವಸೆ ಕೊಡಬೇಕು, ನಾನು ಮಾನ್ಯ ಮುಖ್ಯಮಂತ್ರಿಗಳ ಗಮನ ಸೆಳೆಯುತ್ತಿದ್ದೇನೆ. ದಯವಿಟ್ಟು ಈ ಟಾಸ್ಕ್‌ಫೋರ್ಸ್ ಸಮಿತಿಯನ್ನು ತಾವು ಮುಂದುವರೆಸಬೇಕು ಮತ್ತು ಹಣ ಬಿಡುಗಡೆ ಮಾಡಬೇಕು. ಸುಮ್ಮನೆ ಬರಿಕೈಯಲ್ಲಿ ಕಡಗವಿದೆ ಎಂದರೆ ಆಗುವುದಿಲ್ಲ, ಬರೀ ಮಾತನಾಡಿದರೆ ಆಗುವುದಿಲ್ಲ, ಗಾಣಗಿತ್ತಿ ಅಯ್ಯೋ ಎಂದರೆ ಆಗುವುದಿಲ್ಲ, ಆದ್ದರಿಂದ ಹಣ ಬಿಡುಗಡೆ ಮಾಡಬೇಕು. ಹಣವೇ ಇಲ್ಲದಿರುವಾಗ ಸುಮ್ಮನೆ ನೀವು ಹೋಗಿ ಟಾಸ್ಕ್‌ಫೋರ್ಸ್ ಸಮಿತಿ ಎಂದರೆ ಹೇಗೆ? ನಾವು ಕೇಳತಕ್ಕದ್ದು ಎಂದರೆ ಟಾಸ್ಕ್‌ಫೋರ್ಸ್ ಸಮಿತಿ ಖಾಯಂ ಆಗಬೇಕು, ಇಡೀ ರಾಜ್ಯದಲ್ಲಿ ಎಷ್ಟು ಕಡೆ ಬೋರ್‌ವೆಲ್‌ಗಳನ್ನು ತೆಗೆಸಬೇಕೆಂದಿದ್ದೇವೆ, ಅದಕ್ಕೆ ಕೂಡಲೇ ಈ ಸದನದಲ್ಲಿ ಇಷ್ಟು ಹಣವನ್ನು ಬಿಡುಗಡೆ ಮಾಡಿದ್ದೇವೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕು.

**ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ):** ಮಾನ್ಯ ಅಧ್ಯಕ್ಷರೇ ಬಹಳ ಮುಖ್ಯವಾಗಿ ಕುಡಿಯುವ ನೀರಿನ ಸಮಸ್ಯೆಯದ್ದು ಬಹಳ ಗಂಭೀರವಾದ ಪರಿಸ್ಥಿತಿ ಇದೆ. ಟ್ರಾನ್ಸ್‌ಫೋರ್ಟೇಷನ್ ಮಾಡುತ್ತಿದ್ದೇವೆ, ಮತ್ತು ಈ ಟ್ರಾನ್ಸ್‌ಪೋರ್ಟೇಷನ್‌ಗೆ ಖರ್ಚು ಮಾಡುವ ಹಣ ನಮ್ಮ ತಾಲ್ಲೂಕಿನಲ್ಲೆ 70 ಲಕ್ಷ ರೂ. ಬಾಕಿ ಇದೆ. ಆ ಹಣವನ್ನು ಪಾವತಿ ಮಾಡಿಲ್ಲ. ಆದ್ದರಿಂದ ತಾಲ್ಲುಕು ಮತ್ತು ಜಿಲ್ಲಾ ಪಂಚಾಯತಿಗಳ ಅವಧಿ ಮುಗಿದಿದೆ. ಟಾಸ್ಕ್‌ಫೋರ್ಸ್ ಇಲ್ಲವೆಂದರೆ, ಕುಡಿಯುವ ನೀರಿಗೆ ಗಂಭೀರವಾದ ಪರಿಸ್ಥಿತಿ ನಿಮಾಣವಾಗುತ್ತದೆ. ಮತ್ತು ಅದಕ್ಕೆ ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ಒತ್ತಾಯ ಮಾಡುವುದೇನೆಂದರೆ ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿಗಳ ಅವಧಿ ಮುಗಿದಿರುವ ಕಾರಣಕ್ಕೋಸ್ಕರ ಕುಡಿಯುವ ನೀರಿನ ಸಮಸ್ಯೆ ಗಂಭೀರವಾಗಿರುವ ಕಾರಣಕ್ಕೋಸ್ಕರ ಟಾಸ್ಕ್‌ಫೋರ್ಸ್‌ನ್ನು ಮುಂದುವರೆಸಬೇಕು. ಮತ್ತು ಬಾಕಿ ಇರುವ ಹಣವನ್ನು ತಕ್ಷಣ ಬಿಡುಗಡೆ ಮಾಡಬೇಕು. ನಮ್ಮಲ್ಲಿ ಒಂದೇ ಕಡೆಯಲ್ಲಿ ಟ್ರಾನ್ಸ್‌ಪೋರ್ಟ್ ಮಾಡಿರುವ ಹಣ 70 ಲಕ್ಷ ರೂ. ಬಾಕಿ ಇದೆ, ಆರು ತಿಂಗಳಿಂದ ಬಾಕಿ ಇರುವುದನ್ನು ಕೊಟ್ಟಿಲ್ಲ. ಆ ಹಣವನ್ನು ಕೂಡಲೇ ಬಿಡುಗಡೆ ಮಾಡಬೇಕು ಹಾಗೂ ಟಾಸ್ಕ್‌ಫೋರ್ಸ್ ಸಮಿತಿಯನ್ನು ಮುಂದುವರೆಸಬೇಕು.

**ಶ್ರೀ ಎಸ್. ರಾಜೇಂದ್ರನ್: (ಕೆಜಿಎಫ್):** ಅಧ್ಯಕ್ಷರೇ, ಮುಖ್ಯಮಂತ್ರಿಗಳು ಕೋಲಾರ ಜಿಲ್ಲೆಗೆ Sudden surprise ಆಗಿ ಬಂದರು. ಕುಡಿಯುವ ನೀರಿನ ಬಗ್ಗೆ ಮಾತನಾಡಿಕೊಂಡಿರುವ ಸಂದರ್ಭದಲ್ಲಿ ಕೆಜಿಎಫ್‌ನ ಅಂಡರ್ ಗ್ರೌಂಡ್ ವಾಟರ್‌ನ್ನು ಸರಿಪಡಿಸಿದರೆ ಇಡೀ ತಾಲ್ಲೂಕಿಗೆ ಹಂಚಬಹುದು ಅದಕ್ಕೊಂದು ಎಸ್ಟಿಮೇಟ್ ಮಾಡಿ ಅಂತ ಹೇಳಿದರು. ನಮ್ಮ ಕೋಲಾರ ಜಿಲ್ಲೆಯಲ್ಲಿ 50 ಕೋಟಿ ರೂ. ಖರ್ಚು ಮಾಡುವ ಬಗ್ಗೆ ಕಳೆದ ಕೆಡಿಪಿ ಸಭೆಯಲ್ಲಿ ತಾವು ಮಾತನಾಡಿದ್ದೀರಿ. ಅದರ ಬಗ್ಗೆ ಅವರು ವರದಿ ಕೊಟ್ಟಿದ್ದಾರೆ. ಏನೆಂದರೆ 26 ಕೋಟಿ ರೂ.ಗಳಲ್ಲಿ ತಾಲ್ಲೂಕಿಗೇ ನಾವು ನೀರು ಕೊಡಬಹುದು ಎಂದು. ಕ್ಯಾಬಿನೆಟ್‌ನಲ್ಲಿ ಏನೋ ಹಣಕಾಸಿನ ಕೊರತೆ ಅಂತ ಹೇಳಿ ಅದು ತಮ್ಮ ಕಚೇರಿಗೆ ಬಂದಿದೆ. ಅದರ ಬಗ್ಗೆ ತಾವು ಕ್ರಮ ತೆಗೆದುಕೊಳ್ಳಿ. Just it is matter of Rs. 26 crores if you spend, entire Bangarpet Taluk ಗೆ ನಾವು ನೀರು ಕೊಡಬಹುದು ಸ್ವಾಮಿ. underground ನಿಂದ ಇದನ್ನು

ಕೊಡಬಹುದು. ಅದರ ಬಗ್ಗೆ ನೀವು ವರದಿಯನ್ನು ಕೇಳಿದ್ದಿರಿ. ಇದು ತಮಾಷೆಯಲ್ಲ. ತಾವು ಏನಾದರು ಸೀರಿಯಸ್ಸಾಗಿ ತೆಗೆದುಕೊಳ್ಳಿ. ಕೆ.ಯು.ಡಬ್ಲ್ಯು.ಎಸ್.ಎಸ್.ಬಿನಲ್ಲಿ ಅವರು ರಿಪೋರ್ಟ್ ಮಾಡಿ underground water ನ್ನೇ ಇಷ್ಟು ತೆಗೆದರೆ, ಡೀಸಿಲ್ಟಿಂಗ್ ಮಾಡಿ ಕ್ಲೀನ್ ಮಾಡಿ ಕೊಡಬಹುದು ಅಂತ ಕೊಟ್ಟಿದ್ದಾರೆ. ಅಂದಮೇಲೆ ಅವರು ಕೊಟ್ಟಿರುವ ಮಾಹಿತಿ ತಪ್ಪು ಎಂದರೆ you just dismiss that Managing Director. ಆ department ಬೇಡ ಬಿಡಿ. ಈಗ ತಾವು ಹೇಳಿದಿರಿ ಸಯನೈಡ್ ಇದೆ ಅಂತ. ಅವರು ಹೇಳುತ್ತಾರೆ ನಾವು ಅದನ್ನು ಕ್ಲೀನ್ ಮಾಡಿ ಕೊಡಬಹುದು ಎಂದು. ಯಾವುದಾದರೂ ಒಂದು ರೀತಿಯಲ್ಲಿ itis a dying city, ಕುಡಿಯುವುದಕ್ಕೆ ನೀರಿಲ್ಲ maximum 30 borewells ಏನು ಕೊಟ್ಟಿದ್ದಾರೆ ಅವುಗಳಿಗೆ ಇನ್ನೂ ಕನೆಕ್ಷನ್ ಕೊಟ್ಟಿಲ್ಲ. ಮಾನ್ಯ ವಾಟಾಳ್ ನಾಗರಾಜ್ ಹೇಳಿದರು ಸಾವಿರ ಬೋರ್‌ವೆಲ್ ರಿಪೇರಿ ಇದೆ ಎಂದು. ನಾನು ಅಷ್ಟು ಕೇಳಿಲ್ಲ Not even 100 borewells, till today. ತಾವು ತಮಾಷೆಯಾಗಿ ಏನು ಹೇಳಿದಿರಿ 50 ಕೋಟಿ ರೂ ಕೋಲಾರ ಜಿಲ್ಲೆಗೆ ಖರ್ಚು ಮಾಡಿದ್ದೀರಿ ಅಂತ. 26 ಕೋಟಿ ರೂ. ಖರ್ಚು ಮಾಡಿದ್ದರೆ ಸುಮಾರು ತಾಲ್ಲೂಕಿನ ನಾವು ಕುಡಿಯುವ ನೀರಿಗೆ ಕಂಟ್ರೋಲ್ ಮಾಡಬಹುದು. ಬೇಕಾದಷ್ಟು ನೀರಿದೆ. You don't ignore because it is a Reserved Contituency. ತಮಗೆ ಗೊತ್ತಿದೆ, ನಿಜವಾಗಿ, ಸುಮಾರು ಸಲ, ಮುಖ್ಯಮಂತ್ರಿಗಳು visited Kolar ಮತ್ತು All of sudden, ಆಶ್ವಾಸನೆಯನ್ನೂ ಕೊಟ್ಟಿದ್ದಾರೆ, ಗಂಭೀರ ಮಾತನ್ನೂ ಹೇಳಿದ್ದಾರೆ, ಎಷ್ಟು ಖರ್ಚಿದ್ದರೂ ಕುಡಿಯುವ ನೀರಿಗೆ ನಾವು ಕೊಡುತ್ತೇವೆ ಎಂದು. ಕನಿಷ್ಟ 26 ಕೋಟಿ ರೂ.ಗಳನ್ನು ತಾವು ಸಿಎಂ ಹತ್ತಿರ ಕುಳಿತು ಖುದ್ದಾಗಿ ನಮಗೆ ರಿಲೀಸ್ ಮಾಡಿ ಕೊಟ್ಟರೆ ಕೆಜಿಎಫ್‌ಗೆ ಅನುಕೂಲವಾಗುತ್ತದೆ ಮತ್ತು ಇಡೀ ಬಂಗಾರಪೇಟೆ ತಾಲ್ಲೂಕಿಗೇ ಅನುಕೂಲವಾಗುತ್ತದೆ. Therefore I request my Hon. Chief Minister, Sir, to Sanction the amount.

**ಶ್ರೀ ಕೆ ಜಯಪ್ರಕಾಶ್ ಹೆಗಡೆ** (ಬ್ರಹ್ಮಾವರ): ಟಾಸ್ಕ್ ಫೋರ್ಸ್ ಮಾಡಿದ್ದರ ಅಡ್ವಾಂಟೇಜ್ ಏನೆಂದರೆ ಅಧಿಕಾರಿಗಳಾಗಿದ್ದರೆ ಎಷ್ಟು ಹಣ ಸರ್ಕಾರದಿಂದ ಬರುತ್ತಾ ಇತ್ತೋ ಅಷ್ಟಕ್ಕೆ ಮಾತ್ರ ಎಸ್ಟಿಮೇಟ್ ಮಾಡಿ ಕೆಲಸವನ್ನು

ಮಾಡುತ್ತಿದ್ದರು. ನಮಗೆಲ್ಲಾ ಟಾಸ್ಕ್ ಫೋರ್ಸ್ ಅಧ್ಯಕ್ಷತೆ ಕೊಡುವ ಮುಂದೆ ಅದೇ ಆಗುತ್ತಿತ್ತು. ನಂತರವೂ ಅದನ್ನೇ ಹೇಳುತ್ತಿದ್ದರು. ಇಂಜಿನಿಯರ್‌ಗಳು ಎಸ್ಟಿಮೇಟ್ ಮಾಡಲು ತಯಾರಿರಲಿಲ್ಲ. ಯಾವ ಹೆಡ್‌ನಲ್ಲಿ ಕೆಲಸವನ್ನು ಮಾಡುವುದು ಎಂದು ಕೇಳಿತ್ತಿದ್ದರು. ಮತ್ತು ಹಾಗೆ ಹೇಳಿದಾಗ ನಾವು ಹೇಳಿದೆವು ಸರ್ಕಾರ ಹೇಳಿದೆ ಹಣವನ್ನು ಎಷ್ಟಾದರೂ ಕೊಡುತ್ತೇವೆ ಅಂತ. ಅದಕ್ಕೋಸ್ಕರ ಕೆಲಸ ಮಾಡಿ ಅಂತ ನಾವು ನಾವು ಧೈರ್ಯ ಹೇಳಿದ್ದಕ್ಕೋಸ್ಕರ ಗುತ್ತಿಗೆದಾರರು ಬೋರ್‌ವೆಲ್‌ನಲ್ಲಿ ಕೆಲಸ ಮಾಡಿದ್ದಾರೆ. ಈಗ ಹಣ ಬಾಕಿ ಇದೆ, ಮತ್ತು ವಿಸ್ತರಣೆ ಕೆಲಸ ಕೆಲವು ಅರ್ಧರ್ದದಲ್ಲಿ ನಿಂತಿದೆ. ಅದನ್ನೆಲ್ಲಾ ಸಂಪೂರ್ಣ ಮಾಡಬೇಕಾದರೆ ಈ ಟಾಸ್ಕ್ ಫೋರ್ಸ ಮುಂದುವರೆಯಲೇ ಬೇಕಾಗುತ್ತದೆ. ಇಲ್ಲದೇ ಇದ್ದರೆ ಪುನಃ ಎಲ್ಲಿಗೆ ನಾವು ನಿಲ್ಲಿಸಿದ್ದೆವು ಅಲ್ಲಿಂದ ಕೆಲಸ ಮುಂದುವರೆಯುವುದಿಲ್ಲ ಮತ್ತು ಬಾಕಿ ಇರುವ ಹಣ ಕೂಡ ಪೇಮೆಂಟ್ ಆಗುವುದಿಲ್ಲ. ಇವೆಲ್ಲ ವ್ಯವಸ್ಥೆಯಾಗುವವರೆಗೆ ಈ ಟಾಸ್ಕ್‌ಫೋರ್ಸ್‌ನ್ನು ಮುಂದುವರೆಸಬೇಕು ಅಂತ ತಮ್ಮ ಮೂಲಕ ಸರ್ಕಾರವನ್ನು ನಾನು ಕೇಳೀಕೊಳ್ಳುತ್ತಾ ಇದ್ದೇನೆ.

**ಶ್ರೀ ಬಂಡೆಪ್ಪ ಕಾಶಂಪುರ:** ಅಧ್ಯಕ್ಷರೇ ಇಡೀ ಬೀದರ್ ಜಿಲ್ಲೆಯಲ್ಲಿ ಇನ್ನೂ ತನಕ ಮಳೆಯಾಗಿಲ್ಲ. ಬಹಳಷ್ಟು ಮೊದಲಿನಿಂದ ಯಾವ ಪರಿಸ್ಥಿತಿ ಇತ್ತೋ ಇವತ್ತಿಗೂ ಅದೇ ಪರಿಸ್ಥಿತಿ ಇದೆ. ಅದಕ್ಕಾಗಿ ಟಾಸ್ಕ್‌ಫೋರ್ಸ್‌ನ್ನು ತೆಗೆಯದೆ ಮುಂದುವರೆಸಬೇಕೆಂದು ನಮ್ಮದೂ ವಿನಂತಿ ಇದೆ.

**ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು):** ಮಾನ್ಯ ಅಧ್ಯಕ್ಷರೇ ಇದಕ್ಕೆ ಸಂಬಂಧಪಟ್ಟಂಥ ಮಹಾದೇವಪ್ಪನವರು ಬಂದಿದ್ದಾರೆ. ಅವರು ಕೂಡ ವಿವರವಾದ ಹೇಳಿಕೆಯನ್ನು ನೀಡುತ್ತಾರೆ. ಕುಡಿಯುವ ನೀರಿಗೆ ಸಂಬಂಧಪಟ್ಟ ಹಾಗೆ ಸಚಿವ ಸತ್ಯನಾರಾಯಣ್ ಅವರು ಕೂಡ ಹೇಳಿಕೆಯನ್ನು ಮಾಡುತ್ತಾರೆ. ಈಗಾಗಲೇ ಬಹಳ ಮುಖ್ಯವಾದ ವಿಷಯದ ಬಗ್ಗೆ ವಿರೋಧ ಪಕ್ಷದ ನಾಯಕರು ಮತ್ತು ಎಲ್ಲ ನಾಯಕರುಗಳು ಪ್ರಸ್ತಾಪ ಮಾಡಿದ್ದಾರೆ. ಕುಡಿಯುವ ನೀರಿನ ಬಗ್ಗೆ ಹೋದ ಅಧಿವೇಶನದಲ್ಲಿ ಏನು ಒಂದು ಟಾಸ್ಕ್‌ಫೋರ್ಸ್‌ನ್ನು ಎಂಎಲ್‌ಎರವರ ಅಧ್ಯಕ್ಷತೆಯಲ್ಲಿ ರಚನೆ ಮಾಡಿದ್ದೆವು ಅದು ಇನ್ನೂ ಮುಂದುವರೆಸಿಕೊಂಡು ಹೋಗಬೇಕು ಅಂತ ಹೇಳೀದ್ದಾರೆ. ಏಕೆಂದರೆ ಜಿಲ್ಲಾ ಮತ್ತು ತಾಲ್ಲುಕು ಪಂಚಾಯಿತಿಗಳು ಇನ್ನೂ ಎರಡು ಮೂರು ತಿಂಗಳು ಮುಂದೆ

ಹೋಗಬಹುದು. ಅದು ಕೋರ್ಟ್ ಮತ್ತು ಚುನಾವಣಾ ಆಯೋಗದ ಮಧ್ಯೆ ಇರುವ ವಿಚಾರ. ಅದು ನಮಗೇನು ಸಂಬಂಧಪಟ್ಟಿದ್ದಲ್ಲ. ಅದಕ್ಕೆ ರಿಟ್ ಪಿಟಿಷನ್ ಹೋಗಿದೆ ಮತ್ತು ಕೋರ್ಟ್ ಕೂಡ ಇನ್ನೂ ಅದರ ಬಗ್ಗೆ ತೀರ್ಮಾನ ಕೊಟ್ಟಲ್ಲ, ಅಲ್ಲಿಯವರೆಗೆ ನಾವೇನೂ ಮಾಡುತ್ತಿದ್ದೇವೆ ಎಂದರೆ ಇವತ್ತು ಜಿಲ್ಲಾ ಪಂಚಾಯಿತಿ ಅಧ್ಯಕ್ಷರ ಅವಧಿ ಮುಗಿದಿದೆ, ತಾಲ್ಲುಕು ಪಂಚಾಯಿತಿ ಅಧ್ಯಕ್ಷರ ಅವಧಿ ಮುಗಿದಿದೆ. ಅಲ್ಲಿಗೆ ಆಡಳಿತಾದಿಕಾರಿಯನ್ನು ನೇಮಕ ಮಾಡುವ ನಿರ್ಣಯವನ್ನು ನಾವು ನಿನ್ನೆ ತೆಗೆದುಕೊಂಡಿದ್ದೇವೆ. ಇವತ್ತು ಶಾಸಕರ ಅಧ್ಯಕ್ಷತೆಯಲ್ಲಿ ಟಾಸ್ಕ್ ಫೋರ್ಸ್ ಏನು ಕೆಲಸ ಮಾಡುತ್ತಿತ್ತು ಅದರ ಅಧಿಕಾರವೂ ಕೂಡ 30–06–2005 ಕ್ಕೆ ಮುಗಿದಿದೆ. ಇನ್ನೂ ಕೂಡ ಕುಡಿಯುವ ನೀರಿನ ಸಮಸ್ಯೆ ಕೆಲವು ಜಿಲ್ಲೆಗಳಲ್ಲಿದೆ. ಉತ್ತರ ಕರ್ನಾಟಕದ ನಮ್ಮ ಭಾಗದಲ್ಲಿ ಇನ್ನೂ ಕೂಡ ಮಳೆ ಬಂದಿಲ್ಲ ಮತ್ತು ಇದೇ ಪರಿಸ್ಥಿತಿ ಬೇರೆ ಕಡೇನೂ ಇದೆ. ಜಿಲ್ಲಾ ತಾಲ್ಲೂಕು ಪಂಚಾಯ್ತಿಗಳ ಚುನಾವಣೆ ಆಗುವತನಕ ಇನ್ನು ಮೂರು ತಿಂಗಳು ಟಾಸ್ಕ್ ಫೋರ್ಸ್‌ನ್ನು ಕೂಡ ಮುಂದುವರೆಸುತ್ತೇವೆ. ಬೇರೆ ವಿಚಾರಗಳ ಬಗ್ಗೆ ವಿವರವಾದ ಹೇಳಿಕೆಯನ್ನು ಸಂಬಂಧಪಟ್ಟ ಸಚಿವರು ನೀಡುತ್ತಾರೆ.

**ಶ್ರೀ ಎಂ.ವೈ. ಪಾಟೀಲ್ (ಅಫ್ಜಲ್‌ಪುರ):** ಅಧ್ಯಕ್ಷರೇ ಅಫ್ಜಲ್‌ಪುರ ನಗರಕ್ಕೆ ಕುಡಿಯುವ ನೀರಿಗೆ ಬಹಳಷ್ಟು ಸಮಸ್ಯೆಯಾಗಿದೆ. ಈಗಾಗಲೇ ಭೀಮಾ ನದಿಯಿಂದ ಕುಡಿಯುವ ನೀರಿನ ಯೋಜನೆ ಇತ್ತು ಆದರೆ ಭೀಮಾ ನದಿ ಬತ್ತಿಹೋಗಿದೆ. ಮಹಾರಾಷ್ಟ್ರದ ಉಜಿನಿ ಡ್ಯಾಂನಿಂದ ನಮ್ಮ ಪಾಲಿನ ನೀರೇನು ಬರಬೇಕಾಗಿತ್ತು ಅದನ್ನು ಬಿಡುತ್ತಿಲ್ಲ.

**ಶ್ರೀ ಜೆ.ಸಿ. ಮಾಧುಸ್ವಾಮಿ:** ಒಂದು ನಿಮಿಷ ಸಾರ್, ಶಾಶ್ವತವಾದ ಸಮಿತಿ ಮಾಡಬೇಕು ಅಂತ ನಾವು ಕೇಳುತ್ತಿದ್ದೇವೆ, ಪ್ರತಿ ಮೂರು ತಿಂಗಳಿಗೂ ನಾವು ಇಲ್ಲಿ ನಿಂತು ಕೇಳೋಕ್ಕಾಗುತ್ತಾ? ಟಾಸ್ಕ್‌ಫೋರ್ಸ್‌ನ್ನು ಇನ್ನು ಮೂರು ತಿಂಗಳು ಮುಂದಕ್ಕೆ ಹಾಕುತ್ತಿದ್ದೇವೆ ಅಂದರೆ ಏನು ನಮ್ಮ ಕೆಲಸಕ್ಕೆ ಮುಂದಕ್ಕೆ ಹಾಕುತ್ತಿದ್ದಾರಾ ಸಾರ್? ದಯಮಾಡಿ ಮುಖ್ಯಮಂತ್ರಿಗಳು ಒಪ್ಪಿಕೊಳ್ಳಬೇಕಾಗಿದೆ, ಟಾಸ್ಕ್‌ಫೋರ್ಸ್ ಯಾವಾಗಲೂ ಇರಬೇಕು ಮತ್ತು ಅದು ಎಂಎಲ್‌ಎಗಳ ಅಧ್ಯಕ್ಷತೆಯಲ್ಲೇ ಇರಬೇಕು. ಇದನ್ನು ಮೂರು ತಿಂಗಳು, ಆರು ತಿಂಗಳಿಗೆ ಮುಂದಕ್ಕೆ ಹಾಕುತ್ತೇವೆ ಅಂದರೆ ಏನೋ ಬಡ್ಡಿ ಕಟ್ಟುವುದಕ್ಕೆ ನಮಗೆ ಮೂರು ತಿಂಗಳು ಟೈಂ ಕೊಡಿ ಅಂತ ಕೇಳಿರುವುದು ಬಿಟ್ಟರೆ ಎಂಎಲ್‌ಎಗಿರಿ

ಮಾಡುವುದಕ್ಕೂ ಮೂರು ತಿಂಗಳು ಕೊಡಿ ಎರಡು ತಿಂಗಳು ಕೊಡಿ ಒಂದು ತಿಂಗಳು ಕೊಡಿ ಅಂದರೆ ಅದಕ್ಕೂ ಇದಕ್ಕೂ ಸಂಬಂಧ ಇಲ್ಲ. ಚುನಾವಣೆ ಆದರೆ ಇದಕ್ಕೆ ಜಿಲ್ಲಾ ಪರಿಷತ್ ಅಧ್ಯಕ್ಷರು ಅಧ್ಯಕ್ಷರಾಗುತ್ತಿರಲಿಲ್ಲ, ನಿಮ್ಮ ತಾಲ್ಲೂಕು ಪಂಚಾಯ್ತಿ ಅಧ್ಯಕ್ಷರೇನೂ ಇರುತ್ತಿರಲಿಲ್ಲ. ನಾವಿದ್ದುದ್ದನ್ನು ತಾವು ಮುಂದುವರೆಸಬೇಕು. ಶಾಶ್ವತವಾಗಿ ಮುಂದುವರೆಸಬೇಕು.

**ಶ್ರೀ ಬಿ.ಎಸ್. ಯಡಿಯೂರಪ್ಪ:** ಯಾವಾಗ ತಾವು ಈ ಟಾಸ್ಕ್‌ಫೋರ್ಸ್‌ನ್ನು ರಚನೆ ಮಾಡಿದಿರಿ ಆಗ ತಾಲ್ಲೂಕು ಪಂಚಾಯ್ತಿಗಳು ಜಿಲ್ಲಾ ಪಂಚಾಯ್ತಿಗಳ ಅಸ್ತಿತ್ವದಲ್ಲಿದ್ದವು. ಆವಾಗಲೇ ಈ ಸದನದಲ್ಲಿ ವ್ಯಾಪಕವಾದ ಚರ್ಚೆಯಾಗಿ ಕಡೇ ಪಕ್ಷ ಕುಡಿಯುವ ನೀರಿಗೆ ಹಾಹಕಾರ ಇರುವ ಸಂದರ್ಭದಲ್ಲಿ ಶಾಸಕರು ತಲೆ ತಗ್ಗಿಸಿ ಓಡಾಡುವ ಪರಿಸ್ಥಿತಿ ಬರಬಾರದು, ತತ್‌ಕ್ಷಣ ಸ್ಪಂದಿಸುವಂತಹ ವ್ಯಸ್ಥೆಯಾಗಬೇಕು ಎಂಬ ದೃಷ್ಟಿಯಿಂದ ಜಿಲ್ಲಾ ತಾಲ್ಲೂಕು ಮತ್ತು ಗ್ರಾಮ ಪಂಚಾಯ್ತಿಗಳ ಸದಸ್ಯರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಈ ಟಾಸ್ಕ್‌ಫೋರ್ಸ್‌ನ್ನು ತಾವು ರಚನೆ ಮಾಡಿದ್ದಿರಿ. ಎಲ್ಲಾದರೂ ಕಂಪ್ಲೇಂಟ್ ಬಂದಿದೆಯಾ? ಆದ್ದರಿಂದ ಈಗ ಜಿಲ್ಲಾ ಪಂಚಾಯ್ತಿ ಮತ್ತು ತಾಲ್ಲೂಕು ಪಂಚಾಯ್ತಿಗಳು ಅಸ್ತಿತ್ವದಲ್ಲಿಲ್ಲ, ಅದಕ್ಕೇ ಮೂರು ತಿಂಗಳು ನಾವು ಮಾಡುತ್ತೇವೆ ಅನ್ನುವುದಕ್ಕೆ ಏನೂ ಅರ್ಥವಿಲ್ಲ. ಅವರು ಹೇಳಿದಂತೆ ಶಾಸಕರು ಅವರ ಪರವಾಗಿ ಏನೋ ಕೇಳಿದಂತೆ ಆ ಕಡೆ ಇರುವವರೆಗೂ ಮಾತನಾಡಬೇಕು, ಇದರಲ್ಲಿ ಪಕ್ಷಬೇಧ ಏನಿಲ್ಲ. ಇದರಲ್ಲೇನಿದೆ? ಇದು ಮಂತ್ರಿಗಳೂ ಸೇರಿ ಎಲ್ಲರದ್ದೂ ಒಂದೇ ಅಭಿಪ್ರಾಯ ಇರುವಂಥದ್ದು. ಆದುದರಿಂದ ಈ ಟಾಸ್ಕ್‌ಫೋರ್ಸ್‌ನ್ನು ಶಾಶ್ವತವಾಗಿ ಶಾಸಕರ ಅಧ್ಯಕ್ಷತೆಯಲ್ಲಿ ಮುಂದುವರೆಸುವ ತೀರ್ಮಾನವನ್ನು ತಾವು ಕೈಗೊಳ್ಳಬೇಕು.

**ಮಾನ್ಯ ಸದಸ್ಯರು:** ವಿರೋಧ ಪಕ್ಷದ ನಾಯಕರು ಏನು ಮಾತನಾಡುತ್ತಿದ್ದಾರೆ ಅದು ಸಂಜಸವಾಗಿದೆ. ಅದು ಒಬ್ಬರಿಗೋಸ್ಕರವಲ್ಲ. ಕುಡಿಯುವ ನೀರಿಗಾಗಿ ಅದನ್ನು ಮಾಡಲೇ ಬೇಕಾಗುತ್ತದೆ. ಅವರು ಹೇಳಿದ ಹಾಗೆ ಮೂರು ತಿಂಗಳಿಗೆ ಸಮಸ್ಯೆಯನ್ನು ಪರಿಹಾರ ಮಾಡುವುದಕ್ಕಾಗುವುದಿಲ್ಲ. ಇದನ್ನು ಮುಂದುವರೆಸಬೇಕು ಸ್ವಾಮಿ. ಇಲ್ಲದಿದ್ದರೆ ಸಮಸ್ಯೆಯನ್ನು ಪರಿಹಾರ ಮಾಡುವುದಕ್ಕೆ ಆಗುವುದಿಲ್ಲ.

(ಮುಂದಿನ)

**ಶ್ರೀ ವಾಟಾಳ್ ನಾಗರಾಜ್:** ಒಟ್ಟಾರೆ ಈ ಸದನದ ಅಭಿಪ್ರಾಯ ಪಕ್ಷಬೇಧ ಮರೆತು ಟಾಸ್ಕ್ ಫೋರ್ಸ್ ಸಮಿತಿ ಖಾಯಂ ಆಗಿ ಇರಬೇಕು ಎನ್ನುವಂಥದ್ದು. ಇಲ್ಲಿ ಪಕ್ಷಬೇಧ ಎಲ್ಲ ಮರೆತ್ತಿದ್ದೇವೆ. ಆದ್ದರಿಂದ ತಾವು ಇದನ್ನು ಒಪ್ಪಬೇಕು. ಕನಿಷ್ಟ 200 ಜನ ಶಾಸಕರು ಈಗಾಗಲೇ ನಾವು ಸಾಲಗಾರರಾಗಿದ್ದೇವೆ, ಇತಿಹಾಸದಲ್ಲಿ ಪ್ರಪ್ರಥಮವಾಗಿ ಹೀಗೆ ಆಗಿರುವುದು. ಟಾಸ್ಕ್ ಫೋರ್ಸ್ ಸಮಿತಿ ಅಧ್ಯಕ್ಷರಾಗಿರುವ ಪ್ರತಿಯೊಬ್ಬ ಶಾಸಕರೂ 80 ಲಕ್ಷ 70 ಲಕ್ಷ ಒಂದು ಕೋಟಿ ರೂ.ಗೆ ನಾವು ಸಾಲಗಾರರಾಗಿದ್ದೇವೆ. ಅದನ್ನು ಯಾವ ರೀತಿ ಹೇಳುವುದು? ಬಹಳ ಭಯಬೀತಿ ಬರುತ್ತಾ ಇದೆ. ದಯಮಾಡಿ ಕಾಯಂ ಆಗಿ ಶಾಶ್ವತ ಸಮಿತಿ ಇರಬೇಕು ಮತ್ತು ಹಣ ಬಿಡುಗಡೆ ಮಾಡಲೇಬೇಕು.

**ಡಾ: ಕೆ. ಅನ್ನದಾನಿ:** ಆಶ್ರಯ ಸಮಿತಿ ಏನಾಯಿತು ಅಂತ ದಯಮಾಡಿ ಅದರ ಬಗ್ಗೆ ಕೂಡ ಸ್ವಲ್ಪ ಮಾತನಾಡಬೇಕು. ಅದು ಟಾಸ್ಕ್‌ಫೋರ್ಸ್‌ನಷ್ಟೆ ಬಹಳ ಅಗತ್ಯವಾದದ್ದು. ಈ ಆಶ್ರಯ ಸಮಿತಿ ಏನಾಗಿದೆ ಯಾರಿಗೆ ಕೊಟ್ಟಿದ್ದೀರಿ ಏನು ಮಾಡಬೇಕು ಎಂದು ಹೇಳಬೇಕು. ಇವತ್ತಿನವರೆಗೂ ಕೂಡ ಒಬ್ಬ ಬಡವನಿಗೆ ಮನೆ ಕೊಡಲು ಸಾಧ್ಯವಾಗಲಿಲ್ಲ. ಗ್ರಾಮ ಪಂಚಾಯ್ತಿಗೆ ಕೊಡುತ್ತೀರಾ ಅಥವಾ ಶಾಸಕರ ಅಧ್ಯಕ್ಷತೆಯಲ್ಲಿ ಮಾಡುತ್ತೀರಾ? ದಯಮಾಡಿ ಈ ಆಶ್ರಯ ಸಮಿತಿ ಮತ್ತು ಟಾಸ್ಕ್‌ಫೋರ್ಸ್ ಇವೆರಡೂ ತೀರ್ಮಾನವಾಗುವವರೆಗೂ ಸದನವನ್ನು ಬೇರೆ ರೀತಿ ಮುಂದುವರೆಸಲು ಅವಕಾಶ ಮಾಡಿಕೊಡಬೇಡಿ. ಇದು ಆಗಲೇ ಬೇಕು. ಇದಕ್ಕೆ ಎಲ್ಲ ಶಾಸಕರುಗಳ ಒತ್ತಾಯ ಇದೆ.

**(ಗೊಂದಲ)**

**ಅಧ್ಯಕ್ಷರು:** ನಿಲುವಳಿ ಸೂಚನೆ ಮೇಲೆ ಯಾವ್ಯಾವುದೋ ವಿಷಯ ಮಾನಾಡುವ ಹಾಗಿಲ್ಲ.

**ಡಾ: ಕೆ. ಅನ್ನದಾನಿ:** ಇವತ್ತು ಆಶ್ರಯ ಸಮಿತಿ ಬಹಳ ಮುಖ್ಯವಾಗಿರ ತಕ್ಕಂಥಾದ್ದು. ಇವತ್ತು ನಮ್ಮ ಕೈಯಲ್ಲಿ ಒಂದೇ ಒಂದು ಕಚ್ಚಾಮನೆಯನ್ನೂ ಕೊಡುವುದಕ್ಕೆ ಸಾಧ್ಯವಾಗಿಲ್ಲ. ಅಥವಾ ಬಡವರಿಗೆ ಒಂದು ಚಿಕ್ಕ ಮನೆಯನ್ನು ಕೊಡುವುದಕ್ಕೆ ಸಾಧ್ಯವಾಗಿಲ್ಲ. ಒಂದು ಗುಡಿಸಲನ್ನು ಕೊಡುವುದಕ್ಕೆ ಸಾಧ್ಯವಾಗಲಿಲ್ಲ. ಇದುವರೆಗೂ ಆಶ್ರಯ ಸಮಿತಿಯನ್ನು ಏಕೆ ನೇಮಕ ಮಾಡಲಿಲ್ಲ. ಏಕೆ ರಚನೆ ಮಾಡಲಿಲ್ಲವೆಂದು ದಯಮಾಡಿ ಹೇಳಬೇಕು. ಮತ್ತೆ ತಾಲ್ಲೂಕು ಲೆವೆಲ್‌ನಲ್ಲಿ ನೀವು ಯಾವುದೇ ಸಮಿತಿಯನ್ನು ಅದು ಆರಾಧನಾ

ಸಮಿತಿಯಾಗಲಿ, ಒತ್ತುವರಿ ಸಮಿತಿಯಾಗಲಿ, ಯಾವುದೇ ಸಮಿತಿಯನ್ನು ಕೂಡ ಇವತ್ತಿನವರೆಗೂ ನೀವು ಜಾರಿಗೆ ತರಲಿಲ್ಲ. ಆದ್ದರಿಂದ ನಿಜವಾಗಲೂ ಕೂಡ ಸಕ್ರಿಯವಾಗಿ ಏನು ಕೆಲಸ ನಡೆಯುತ್ತಿಲ್ಲ ಎನ್ನುವುದನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

**ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷ ನಾಯಕರು):** ಮಾನ್ಯ ಅಧ್ಯಕ್ಷರೇ, ಇಡಿ ಮನೆ ಒಮ್ಮತದಿಂದ ಹೇಳಿದಾಗ, ಒಕ್ಕೊರಲಿನಿಂದ ಹೇಳಿದಾಗ, ಹಿಂದೆ ನೀವು ಈ ಟಾಸ್ಕ್‌ಫೋರ್ಸ್‌ನ್ನು ರಚನೆ ಮಾಡಿದಾಗ ತಾಲ್ಲೂಕು ಪಂಚಾಯಿತಿ ಜಿಲ್ಲಾ ಪಂಚಾಯಿತಿ ಅಸ್ತಿತ್ವದಲ್ಲಿದ್ದಾಗಲೇ ನೀವು ಮಾಡಿರುವಂಥಾದ್ದು. ನಾನು ಉದಾಹರಣೆ ಕೊಡಬೇಕಾದರೆ ಹೇಗೂ ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಇಲ್ಲ. ಅದರ ಮಹತ್ವವನ್ನು ತಿಳಿಸುವುದಕ್ಕಾಗಿ ನಿಮಗೆ ಹೇಳೀದೆನೇ ಹೊರತು ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಬಂದಮೇಲೆ ಟಾಸ್ಕ್‌ಫೋರ್ಸ್ ಇಲ್ಲ ಎನ್ನುವುದನ್ನು ನೀವು ಮಾಡಲೇಬೇಡಿ. ಅದರ ಅಗತ್ಯವೇನೂ ನಮಗಿಲ್ಲ. ಆದ್ದರಿಂದ ಶಾಸಕರು ಸ್ವಲ್ಪ ಗೌರವಯುತವಾಗಿ ಕುಡಿಯುವ ನೀರಿನ ಈ ಸಮಸ್ಯೆಗಾದರೂ ಸ್ಪಂದಿಸುವುದಕ್ಕೋಸ್ಕರ ನಿಮ್ಮದು ಯಾರದ್ದಾದರೂ ಆಡಳಿತ ಪಕ್ಷದಲ್ಲಿ ವಿರೋಧ ಇದೆಯೇನಪ್ಪ? ಯಾರದೂ ಇಲ್ಲವಲ್ಲ?

**(ಗೊಂದಲ)**

**ಅಧ್ಯಕ್ಷರು:** ಅವರಿಗೆ ಮಂಡನೆ ಮಾಡುವುದಕ್ಕೆ ಅವಕಾಶ ಕೊಡಿ.

**ಶ್ರೀ ಬಿ.ಎಸ್. ಯಡಿಯೂರಪ್ಪ:** ಮಾನ್ಯ ಡಿ.ಆರ್.ಪಾಟೀಲ್ ಅವರನ್ನು ಹೊರತುಪಡಿಸಿ ಇನ್ನುಳಿದವರೆಲ್ಲರದ್ದು ಒಮ್ಮತದ ಅಭಿಪ್ರಾಯ ಇದೆ ಸಾರ್. ದಯಮಾಡಿ ಇದನ್ನು ಶಾಶ್ವತವಾಗಿ ಟಾಸ್ಕ್‌ಫೋರ್ಸ್‌ನ್ನು ರಚನೆ ಮಾಡುವಂಥ ತೀರ್ಮಾನವನ್ನು ತಾವು ತೆಗೆದುಕೊಳ್ಳಬೇಕು.

**ಶ್ರೀ ಬಸವರಾಜ ರಾಯರೆಡ್ಡಿ:** ಮಾನ್ಯ ಅಧ್ಯಕ್ಷರೇ, ಆಶ್ರಯ ಸಮಿತಿ ಪಂಚಾಯಿತಿಗೆ ಕೊಡಿ, ಕುಡಿಯುವ ನೀರಿನ ಬಗ್ಗೆ ಪಂಚಾಯಿತಿಗೆ ಕೊಡಿ, ಇವೆಲ್ಲಾ ನಾವು ಮಾಡುವ ಕೆಲಸವಲ್ಲ. ನಾವು ಕಾನೂನನ್ನು ಮಾಡೋಣ. ಅವರಿಗೆ ಅಧಿಕಾರದ ವಿಕೇಂದ್ರೀಕರಣ ಮಾಡಿ ಹಣವನ್ನು ಕೊಡೋಣ. ದಯಮಾಡಿ ನಾವು ಪಂಚಾಯತ್ ರಾಜ್ ವ್ಯವಸ್ಥೆಯನ್ನು ಹಾಳು ಮಾಡುವುದು

ಬೇಡ. ಸಂವಿಧಾನಬದ್ದವಾಗಿ ಅವರಿಗೆ ಹಕ್ಕು ಸಿಕ್ಕಿದೆ. ದಯಮಾಡಿ ಇದನ್ನು ಎಲ್ಲಾ ಮಾನ್ಯ ಸದ್ಯರುಗಳೂ ಅರ್ಥ ಮಾಡಿಕೊಳ್ಳಬೇಕು.

**ಶ್ರೀ ಡಿ.ಆರ್ ಪಾಟೀಲ್:** ಮಾನ್ಯ ಅಧ್ಯಕ್ಷರೇ ವಿರೋಧಿ ಪಕ್ಷದ ಸ್ನೇಹಿತರಿಗೆ ಆಡಳಿತ ವಿಕೇಂದ್ರೀಕರಣದ ಬಗ್ಗೆ ವಿಶ್ವಾಸ ಇದ್ದಹಾಗೆ ಇಲ್ಲ. ಇದೇ ಸದನ ಅವರಿಗೆ ಆ ಅಧಿಕಾರವನ್ನು ಕೊಟ್ಟಿದೆ. ಕೊಟ್ಟು ಕಸಿದುಕೊಳ್ಳುತ್ತೇವೆಂದರೆ ಹೇಗೇ? ಇದು ಸರಿಯಾದುದಲ್ಲ. ಅವರು ಈಗ ಚುನಾಯಿತರಾಗಿ ಆ ಜವಾಬ್ದಾರಿಯನ್ನು ನಿಭಾಯಿಸುವಂಥ ಕೆಪ್ಯಾಸಿಟಿಯನ್ನು ಪಡೆದುಕೊಂಡಿದ್ದಾರೆ. ಏನೋ ಜೂನ್ 30 ಕ್ಕೆ ಮುಗಿಯುತ್ತದೆಂದು ಅವರು ಸುಮ್ಮನೆ ಕುಳಿತಿದ್ದಾರೆ ಅಷ್ಟೆ. ದಯವಿಟ್ಟು ಇದು ಸರಿಯಲ್ಲ.

**(ಗೊಂದಲ)**

**ಅಧ್ಯಕ್ಷರು–** ದಯಮಾಡಿ ಎಲ್ಲರೂ ಕುಳಿತುಕೊಳ್ಳಬೇಕು.

**(ಗೊಂದಲ)**

**ಶ್ರೀ ಬಿ.ಎಸ್. ಯಡಿಯೂರಪ್ಪ:** ನಮಗೆ ವಿಶ್ವಾಸ ಇಲ್ಲ. ನಿಮಗೇ ವಿಶ್ವಾಸ ಇದೆ ಎಂದು ಹೇಳುತ್ತಿದ್ದೀರಿ. ಹಾಗಾದರೆ ಇಲ್ಲಿರುವ ಶಾಸಕರ ಅಭಿಪ್ರಾಯವನ್ನು ಕೇಳಿ.

**(ಗೊಂದಲ)**

(ಅನೇಕ ಪಕ್ಷದ ಸದಸ್ಯರುಗಳು ಏಕಕಾಲದಲ್ಲಿ ಮಾತನಾಡತೊಡಗಿದರು)

**ಒಬ್ಬ ಮಾನ್ಯ ಸದಸ್ಯರು:** ನಮಗೂ ದಯಮಾಡಿ ಮಾತನಾಡಲು ಅವಕಾಶ ಕೊಡಿ, ಹಿಂದಿನ ಬೆಂಚಿನವರ ಅಭಿಪ್ರಾಯಗಳನ್ನೂ ಕೂಡ ತಾವು ತೀರ್ಮಾನ ಮಾಡುವ ಕಾಲದಲ್ಲಿ ತೆಗೆದುಕೊಳ್ಳಬೇಕು. ಮುಂದಿನ ಸಾಲಿನವರಿಗೆ ಅವಕಾಶ ಕೊಡುತ್ತೀರಿ. ಹಿಂದಿನ ಸಾಲಿನವರಿಗೆ ಅವಕಾಶ ಕೊಡುತ್ತಿಲ್ಲ.

**(ಗೊಂದಲ)**

**ಅಧ್ಯಕ್ಷರು:** ಮಾನ್ಯ ಸತ್ಯನಾರಾಯಣರವರೇ, ಕುಡಿಯುವ ನೀರಿನ ಇಲಾಖಾ ಮಂತ್ರಿಗಳು, ದಯಮಾಡಿ ಹಣ ಬಿಡುಗಡೆ ಬಗ್ಗೆ ಹೇಳಿ. ಮಾನ್ಯ ಮುಖ್ಯಮಂತ್ರಿಗಳು ಏನು ಟಾಸ್ಕ್‌ಫೋರ್ಸ್ ಇದೆ, ಅದನ್ನು ಮುಂದು ವರೆಸುವುದುರ ಬಗ್ಗೆ ಭಾಗಶಃ ಒಪ್ಪಿಕೊಂಡಿದ್ದಾರೆ. ಈಗ ಏನಾಗಿದೆ, ಕುಡಿಯುವ ನೀರಿಗೆ ಏನು ಹಣವನ್ನು ಬಿಡುಗಡೆ ಮಾಡಬೇಕು, ಅದರ ಬಗ್ಗೆ ಮಾನ್ಯ ಮಾನ್ಯ

ಸತ್ಯನಾರಾಯಣ್‌ರವರು ಉತ್ತರವನ್ನು ಕೊಡುತ್ತಾರೆ. ದಯಮಾಡಿ ಎಲ್ಲರೂ ಕುಳಿತುಕೊಳ್ಳಬೇಕು.

**ಡಾ: ಕೆ. ಅನ್ನದಾನ:** ಮಾನ್ಯ ಸಭಾಧ್ಯಕ್ಷರೇ, ಈಗ ನಮ್ಮ ಸದಸ್ಯರು ಈ ಸದನದಲ್ಲಿ ಆಶ್ರಯ ಸಮಿತಿಯನ್ನು ತೀರ್ಮಾನ ಮಾಡಿ ಗ್ರಾಮ ಪಂಚಾಯತಿ ಲೆವೆಲ್‌ಗೆ ನಾವು ಕೊಟ್ಟಿದ್ದೇವೆ ಎನ್ನುವ ಮಾತನ್ನು ಹೇಳಿ ಅದನ್ನು ಮತ್ತೆ ಕಸಿದುಕೊಳ್ಳಬಾರದು ಎನ್ನತಕ್ಕ ಮಾತನ್ನೂ ಹೇಳಿದ್ದಾರೆ. ಬಹಳ ಸಂತೋಷ. ನೀವು ಗ್ರಾಮ ಪಂಚಾಯತಿಗೆ ಕೊಡಿ, ಶಾಸಕರಿಗೇ ಕೊಡಿ, ಯಾರಿಗೆ ಕೊಟ್ಟರೂ ಕೂಡ ಒಂದು ವರ್ಷದಿಂದ ಏನು ಕೆಲಸಕಾರ್ಯಗಳಾಗಿವೆ, ಗ್ರಾಮ ಪಂಚಾಯತಿ ಲವೆಲ್‌ಗಾದರೂ ನೀವು ಕೊಡಿ. ಅವರಿಗೇ ಕೊಡಿ. ಅವರ ಕಡೆಯಿಂದಲಾದರೂ ಒಂದೇ ಒಂದು ಮನೆಯನ್ನು ಕೊಡುವುದಕ್ಕೆ ಸಾಧ್ಯವಾಗಿದೆಯಾ ಎನ್ನುವುದನ್ನೂ ಕೂಡ ನೀವು ದಯಮಾಡಿ ಅರ್ಥ ಮಾಡಿಕೊಳ್ಳಬೇಕು. ಇದುವರೆಗೂ ಕೂಡ ಏತಕ್ಕೆ ಮಾಡುವುದಕ್ಕೆ ಸಾಧ್ಯವಾಗಲಿಲ್ಲ? ಒಂದೇ ಒಂದು ಕಚ್ಚಾ ಮನೆಯನ್ನು ಕೊಡುವುದಕ್ಕೆ ಸಾಧ್ಯವಾಗಿದೆಯಾ? ಒಂದು ಆಶ್ರಯ ಮನೆಯನ್ನು ಕೊಡುವುದಕ್ಕೆ ಸಾಧ್ಯವಾಗಿದೆಯಾ? ಆಶ್ರಯ ಮನೆಗಳನ್ನು ಗ್ರಾಮ ಪಂಚಾಯಿತಿಗೆ ವಹಿಸುತ್ತೇನೆ ಎನ್ನುವ ಮಾತನ್ನು ಅದರ ಬಗ್ಗೆ ಸದನದಲ್ಲಿ ತೀರ್ಮಾನವಾಗಿದೆ ಎನ್ನುವ ಮಾತನ್ನು ಹೇಳುತ್ತೀರಿ. ಅವರಿಗೇ ಅಧಿಕಾರವನ್ನು ಕೊಡಿ, ಅವರಿಗೆ ಮನೆ ಕೊಡಿ, ಅವರಿಗೆ ಕಚ್ಚಾ ಮನೆಯನ್ನು ಕೊಡಿ. ಆದರೆ ಇವತ್ತಿನವರೆಗೂ ಕೊಟ್ಟಿದ್ದೀರಾ? ಒಂದೇ ಒಂದು ಮನೆಯನ್ನು ಗ್ರಾಮ ಪಂಚಾಯಿತಿ ಸದಸ್ಯರಾಗಲೀ ಕೊಡುವುದಕ್ಕೆ ಸಾಧ್ಯವಾಗಿದೆಯಾ? ಅಥವಾ ಶಾಸಕರಿಗೆ ಕೊಡುವುದಕ್ಕೆ ಸಾದ್ಯವಾಗಿದೆಯಾ? ದಯಮಾಡಿ ತಾವು ಇದನ್ನು ಗಮನಿಸಬೇಕು.

**ಶ್ರೀ ಮಹದೇವ:** ಮಾನ್ಯ ಸಭಾಧ್ಯಕ್ಷರೇ, ಈ ಆಶ್ರಯ ಸಮಿತಿಯ ವಿಚಾರದಲ್ಲಿ ಈ ಸದನದಲ್ಲಿ ಬಹಳಷ್ಟು ಗೊಂದಲ ಚರ್ಚೆಗಳಾಗಿವೆ, ದಯವಿಟ್ಟು ಈ ಸದನದಲ್ಲಿ ಇದಕ್ಕೊಂದು ಅಂತ್ಯವನ್ನು ಹಾಡಬೇಕಾಗುತ್ತದೆ. ಏನೆಂದರೆ ಒಂದು ಸಂದರ್ಭದಲ್ಲಿ ಪಂಚಾಯಿತಿಗೆ ಕೊಟ್ಟು ಆಗಿಹೋಗಿದೆ ಎಂದು ತಾವು ಎಲ್ಲರೂ ಹೇಳುತ್ತೀರಿ.....

**ಶ್ರೀ ಕೆ.ಆರ್. ರಮೇಶ್‌ಕುಮಾರ್:** ಮಾನ್ಯ ಸಭಾಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದವರು ನಿಲುವಳಿ ಸೂಚನೆಯನ್ನು ಮಂಡಿಸಿದ್ದಾರೆ. ಅವರು

preliminary submission ಅನ್ನು ಮಾಡಿದ್ದಾರೆ. Leader of the House ಅವರು clarifications ಅನ್ನು ಕೊಟ್ಟಿದ್ದಾರೆ. Further ಅದಕ್ಕೆ ಸಂಬಂಧಪಟ್ಟ ಮಂತ್ರಿಗಳು ಆವಿಚಾರದಲ್ಲಿ ಎಲ್ಲಿಂದ ಎಲ್ಲಗೋ ಹೋಗುತ್ತಿದ್ದಾರೆ. ಈರೀತಿಯಾದರೆ ಬಹಳ ಕಷ್ಟವಾಗುತ್ತದೆ. you must confine to the agenda.

**ಅಧ್ಯಕ್ಷರು:** ಈಗ ನಾನು ಅದನ್ನೇ ಹೇಳುತ್ತಿರುವುದು ಮಾನ್ಯ ರಮೇಶ್‌ಕುಮಾರ್‌ರವರೇ,

**Sri. K.R. Ramesh Kumar:** You must reprimand the Member.

**ಅಧ್ಯಕ್ಷರು:** ಎಲ್ಲರೂ ಎದ್ದುನಿಂತುಕೊಂಡು ಮಾತನಾಡಲು ಆರಂಭ ಮಾಡಿದರೆ, ಇಷ್ಟಬಂದ ರೀತಿಯಲ್ಲಿ ಮಾತನಾಡಲು ಆರಂಭ ಮಾಡಿದರೆ ನಾನೇನು ಮಾಡಲಿ ಹೇಳಿ?

**ಶ್ರೀ ಕೆ.ಆರ್. ರಮೇಶ್‌ಕುಮಾರ್:** ನೋಡಿ, ನಮಗೆ ಆ ಸಂದರ್ಭದಲ್ಲಿ ಎದ್ದು ಹೇಳಲಿಕ್ಕಾಗಲಿಲ್ಲ. ಗೆಳೆಯರಾದ ರಾಯರೆಡ್ಡಿ, ಡಿ.ಆರ್ ಪಾಟೀಲರು ಕೆಲವು ಸಬ್‌ಮಿಷನ್ಸ್ ಅನ್ನು ಮಾಡಿದರು.

**ಅಧ್ಯಕ್ಷರು:** ಯಾವ ವಿಷಯ ಸಭೆಯ ಮುಂದೆ ಇದೆ ಎಂದು ತಿಳಿದುಕೊಳ್ಳದೇ ಮಾತನಾಡಿದರೆ ಹೇಗೆ? ಸಭೆಯನ್ನು ನಿಯಂತ್ರಿಸುವುದು ಹೇಗೇ? ಈ ರೀತಿಯಾದರೆ ಸಭೆಗೆ ಗೌರವ ಬರುತ್ತಾ ನೀವೇ ಹೇಳಿ?

**Sri. K.R. Ramesh Kumar:** It is very embarassing to us. ಅಧ್ಯಕ್ಷರೇ, You must come to our rescue.

**ಅಧ್ಯಕ್ಷರು:** ನಾನು ಈಗ ಮಾನ್ಯ ಸತ್ಯನಾರಾಯಣ ಅವರನ್ನು ಕರೆದಿದ್ದೇನೆ.

**ಶ್ರೀ ಜೆ.ಸಿ. ಮಾಧುಸ್ವಾಮಿ:** ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಡಿ.ಆರ್ ಪಾಟೀಲರು ನಮಗ್ಯಾರಿಗೂ ಪಂಚಾಯತ್ ವ್ಯವಸ್ಥೆ ಮೇಲೆ ನಂಬಿಕೆ ಇಲ್ಲ ಎನ್ನುವ ಮಾತನ್ನು ಆಡಬಾರದು. ಅದು ರೆಕಾರ್ಡ್‌ಗೆ ಹೋಗಿದೆ. ವಿರೋಧ ಪಕ್ಷದವರಿಗೆ ಪಂಚಾಯತ್ ರಾಜ್ ವ್ಯವಸ್ಥೇ ಮೇಲೆ ನಂಬಿಕೆ ಇಲ್ಲ ಎನ್ನುವ ಮಾತು ಅಂಥವರ ಬಾಯಿಂದ ಬರಬಾರದು. ನಂಬಿಕೆಯೇ ಬೇರೆ, ವಾಸ್ತವಾನೇ

ಬೇರೆ. ಅವರೊಬ್ಬರು ಸೀನಿಯರ್ ಮೆಂಬರ್ ಎದ್ದುನಿಂತುಕೊಂಡು ವಿರೋಧ ಪಕ್ಷದವರಿಗೆ ಆ ವ್ಯವಸ್ಥೆ ಮೇಲೆ ನಂಬಿಕೆ ಇಲ್ಲವೆಂದರೆ ಏನರ್ಥ ಸಾರ್?

**ಶ್ರೀ ಕೆ.ಆರ್. ರಮೇಶ್‌ಕುಮಾರ್:** ಮಾನ್ಯ ಮಾಧುಸ್ವಾಮಿಯವರೇ, ವಿಕೇಂದ್ರೀಕರಣ ನಮ್ಮೆಲ್ಲರ ಕರ್ತವ್ಯ. ನಾವೆಲ್ಲರೂ ಕೂಡ ಅದಕ್ಕೆ ಬದ್ದರಾಗಿದ್ದೇವೆ. exigencies,ಈ ತರಹದ್ದು emrgent situation ಅರೈಸ್ ಆದಾಗ ಒಂದು way out ಮಾಡಿಕೊಳ್ಳುವಂಥದ್ದಕ್ಕೆ ಸಲಹೆಯನ್ನು ಕೊಡಲಿ. ಆದರೆ ಮೂಲಬೂತ ನಂಬಿಕೆ ಏನು ಇದೆ, ವಿಕೇಂದ್ರೀಕರಣ ತತ್ವಕ್ಕೆ ನಾವೇನು ಬದ್ದರಾಗಿ ಇದೇ ಸಭೆ ಏನು ಒಪ್ಪಿಗೆಯನ್ನು ಕೊಟ್ಟಿದೆ ಅದರ ವಿರುದ್ಧ ದಿಕ್ಕಿನಲ್ಲಿ ಪ್ರಯಾಣ ಮಾಡತಕ್ಕಂಥದ್ದು ಸಾಧುವಲ್ಲ. ನಾವ್ಯಾರೂ ಮಾಡಬಾರದು. ತಾವು ಮಾಡುತ್ತಿದ್ದೀರಿ. ತಮಗೆ ನಂಬಿಕೆ ಇಲ್ಲ ಎನ್ನತಕ್ಕ ಅಭಿಪ್ರಾಯವನ್ನು ನಾವು ಹೇಳುತ್ತಿಲ್ಲ. ಒಟ್ಟರ್ಥ ಈಗ ಒಂದು ಪರಿಸ್ಥಿತಿ ಉದ್ಭವವಾಗಿದೆ. ನಾವು emergent situationನಲ್ಲಿ ವಿಕೇಂದ್ರೀಕರಣ, ವಿಕೇಂದ್ರೀಕರಣ ಎಂದು ಹೇಳಿಕೊಂಡು ಭಜನೆ ಮಾಡಿಕೊಂಡು ಇರುವುದಕ್ಕಾಗುವುದಿಲ್ಲ. ವಿಕೇಂದ್ರೀಕರಣದ ತತ್ವದಲ್ಲಿ ನಮ್ಮ ನಂಬಿಕೆಯನ್ನು ಮುಂದುವರೆಸುತ್ತಾ ಈ ಎಮರ್ಜೆಂಟ್ ಸಿಚುಯೇಶನ್‌ನಲ್ಲಿ ಟ್ಯಾಕಲ್ ಮಾಡುವುದಕ್ಕೆ we have to find a solution ಅದಕ್ಕೆ let the House come to a consensus. We are all committed to decentralization, There is no question of any attempt, direct or indirect to take away the powers of the Grama Panchayat. They are our own bodies, They are our own creation.

**ಶ್ರೀ ಬಿ.ಎಸ್. ಯಡಿಯೂರಪ್ಪ:** ಮಾನ್ಯ ಅಧ್ಯಕ್ಷರೇ, ಇಲ್ಲಿ ತಪ್ಪು ಗ್ರಹಿಕೆ ಏನಾಗುತ್ತಿದೆ ಎಂದರೆ ದಯಮಾಡಿ ಕ್ಷಮಿಸಿ. ಪಾಟೀಲ್ ಅವರು ಅಭಿಪ್ರಾಯವನ್ನು ಕೊಡುವುದಕ್ಕೆ ನಮ್ಮದೇನೂ ಅಭ್ಯಂತರವಿಲ್ಲ. ಆದರೆ ತಾವೇ ಯೋಚನೆಯನ್ನು ಮಾಡಿ. ಹಿಂದೆ ಆರಾಧನಾ ಸಮಿತಿ ಇದ್ದ ಕಾಲದಲ್ಲೂ ಗ್ರಾಮ ಪಂಚಾಯಿತಿ ಸದಸ್ಯರು ಅವರೆಲ್ಲಾ ಕೊಟ್ಟಂಥದ್ದನ್ನೇ ನಾವು ಅಲ್ಟಿಮೇಟ್ ಆಗಿ ಅವರು ಹತ್ತು ಕಳುಹಿಸಿದರೆ ಐದು ಇದ್ದರೆ ತೀರ್ಮಾನವನ್ನು ಶಾಸಕ ಅಧ್ಯಕ್ಷರು ಮಾಡುತ್ತಿದ್ದರು. ಕುಡಿಯುವ ನೀರಿನ ಪ್ರಶ್ನೆ ಬಂದಾಗ

ಟಾಸ್ಕ್‌ಫೋರ್ಸ್ ರಚನೆ ಮಾಡಿದಾಗಲೂ ಅದೇ ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಅವರೆಲ್ಲರ ಅಭಿಪ್ರಾಯವನ್ನು ತೆಗೆದುಕೊಂಡೇ ನಾವು ಶಾಸಕರುಗಳು ಕೆಲಸವನ್ನು ಮಾಡಿದ್ದೇವೆ. ಅದರ ಅರ್ಥ ಶಾಸಕರ ಅಧ್ಯಕ್ಷತೆಯಲ್ಲಿ ಸಭೆ ಆಯಿತೆಂದರೆ ಅಧಿಕಾರ ವಿಕೇಂದ್ರೀಕರಣದ ವ್ಯವಸ್ಥೆಗೆ ಕುತ್ತು ಬಂತು ಎನ್ನುವ ಭಾವನೆ ಸರಿಯಲ್ಲ. ನೀವು ಒಂದು ಸಲ ತೀರ್ಮಾನ ಮಾಡಿ. ಚರ್ಚೆಯನ್ನು ಮಾಡೋಣ. ಇನ್ನು ಮುಂದೆ ನಮ್ಮ ರಾಯರೆಡ್ಡಿಯವರು ಬಹಳ ದೊಡ್ಡ ಒಂದು ಅನುಭವದ ಮಾತನ್ನು ಹೇಳಿದ್ದಾರೆ. ಇನ್ನು ಮುಂದೆ ಶಾಸಕರು ಶಾಸನ ರಚನೆಯನ್ನು ಮಾಡಬೇಕು, O.K. ಅದನ್ನು ಬಿಟ್ಟು ಇನ್ನೇನೂ ಮಾಡಬಾರದು ಎಂದು ನಿರ್ಧಾರವನ್ನು ತೆಗೆದುಕೊಳ್ಳಲಿ,. ಅದನ್ನು ಮಾಡೋಣ, ನಮ್ಮದೇನೂ ಅಭ್ಯಂತರವಿಲ್ಲ.

**(ಗೊಂದಲ)**

**ಶ್ರೀ ಎ ಪಾಪಾರೆಡ್ಡಿ:** ಮಾನ್ಯ ಅಧ್ಯಕ್ಷರೇ, ಶಾಸನ ರಚನೆ ಮಾಡುವವರು ಟ್ರಾನ್ಸ್‌ಫರ್‌ಗೆ ಎಷ್ಟು ಕಾಗದಗಳನ್ನು ಕೊಟ್ಟಿದ್ದಾರೆ ಎನ್ನುವುದನ್ನು ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಬಹಿರಂಗ ಪಡಿಸಬೇಕು.

**ಶ್ರೀ ಬಿ.ಎಸ್. ಯಡಿಯೂರಪ್ಪ:** ಇಲ್ಲಿ ನಾನು ಮುಖ್ಯಮಂತ್ರಿಗಳನ್ನು ಒತ್ತಾಯ ಮಾಡುತ್ತಿದ್ದೇನೆ, ಟಾಸ್ಕ್‌ಫೋರ್ಸ್‌ನ್ನು ಅದೇ ಗ್ರಾಮ ಪಂಚಾಯತಿ ಸದಸ್ಯರು ನಾಳೆ ತಾಲ್ಲೂಕು ಪಂಚಾಯತಿ ಚುನಾವಣೆಯಾದರೆ ಆ ಸದಸ್ಯರನ್ನು ಬೇಕಾದರೆ ಇಟ್ಟುಕೊಂಡು ಇದನ್ನು ಶಾಸಕರ ಅಧ್ಯಕ್ಷತೆಯಲ್ಲಿ ಮುಂದುವರೆಸಿ. ಇದು ನಡೆದುಕೊಂಡು ಬಂದಿದೆ. ತಾಲ್ಲೂಕು ಪಂಚಾಯತಿ ಜಿಲ್ಲಾ ಪಂಚಾಯತಿ ಇದ್ದಾಗಲೇ ನಾವು ಟಾಸ್ಕ್‌ಫೋರ್ಸನ್ನು ಒಪ್ಪಿಕೊಂಡಿದ್ದೇವೆ. ರಚನೆಯಾಗಿತ್ತು. ಆಗ ಅಧಿಕಾರ ವಿಕೇಂದ್ರೀಕರಣ ವಿಚಾರ ನಮ್ಮ ಗಮನಕ್ಕೆ ಬರಲಿಲ್ಲವಾ? ಆದ್ದರಿಂದ ಯಾವುದ್ಯಾವುದೋ ಸಂದರ್ಭಕ್ಕೆ ಅನುಕೂಲ ಸಿಂದುವಾಗಿ ನಾವು ಮಾತನಾಡುವುದು ಈ ಶಾಸನ ಸಭೆಯಲ್ಲಿ ಆಗದೇನೆ ನಮ್ಮ ಮನಸ್ಸಿನಲ್ಲಿರುವ ಭಾವನೆಗಳನ್ನು ವ್ಯಕ್ತ ಪಡಿಸುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಅಂತಿಮವಾಗಿ ಸರ್ಕಾರವೇ ತೀರ್ಮಾನವನ್ನು ತೆಗೆದುಕೊಳ್ಳಲಿ. ನಾನು ಈಗಲೂ ಮಾನ್ಯ ಮುಖ್ಯಮಂತ್ರಿಗಳನ್ನು ಒತ್ತಾಯ ಮಾಡುವುದು, ಈ ಟಾಸ್ಕ್‌ಫೋರ್ಸ್‌ನ್ನು ಪರ್ಮನೆಂಟ್ ಆಗಿ ಮಾಡಿ. ನಾಳೆ ಬರುವ ತಾಲ್ಲೂಕು ಪಂಚಾಯತಿ ಜಿಲ್ಲಾ ಪಂಚಾಯತಿ ಚುನಾವಣೆಯಾದ ಮೇಲೆ ಆ ಸದಸ್ಯರು ಗ್ರಾಮ ಪಂಚಾಯತಿ

ಸದಸ್ಯರು ಎಲ್ಲರನ್ನೂ ಇಟ್ಟುಕೊಂಡು ಶಾಸಕರ ಅಧ್ಯಕ್ಷತೆಯಲ್ಲಿ ಚರ್ಚೆಯಾದರೆ, ತೀರ್ಮಾನಕ್ಕೆ ಬಂದರೆ ಅದು ಅಧಿಕಾರ ವಿಕೇಂದ್ರೀಕರಣಕ್ಕೆ ಕುತ್ತು ಬರುತ್ತದೆ ಎನ್ನುವ ನಿಮ್ಮ ಭಾವನೆ ಇದ್ದರೆ ಬಹುಶಃ ಅದನ್ನು ನಾನು ವಿರೋಧ ಮಾಡುತ್ತೇನೆ. ಅದು ಸರಿಯಲ್ಲ. ಆ ಗ್ರಾಮ ಪಂಚಾಯತಿಗೆ ಇರುವ ಅಧಿಕಾರ ಸಿಗಲೇಬೇಕು, ಅಧಿಕಾರ ವಿಕೇಂದ್ರೀಕರಣ ವ್ಯವಸ್ಥೆಗೆ ಅಡ್ಡಿಯಾಗಬಾರದು, ಮಾನ್ಯ ರಾಯರೆಡ್ಡಿಯವರು ಹೇಳಿದಂತೆ ನಾವು ಕಾನೂನು ಮಾಡಲು ಮಾತ್ರ ಇರುವುದು ಎಂಬುದು ತಮ್ಮ ಭಾವನೆಯಾದರೆ ಬಹುಶಃ ಅದರ ಬಗ್ಗೆ ಚರ್ಚೆಮಾಡೋಣ, ಒಂದು ತೀರ್ಮಾನಕ್ಕೆ ಬರೋಣ.

**ಶ್ರೀ ಹೆಚ್.ಕೆ. ಪಾಟೀಲ್(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):** ಮಾನ್ಯ ಅಧ್ಯಕ್ಷರೆ, ಮಾನ್ಯ ಯಡಿಯೂರಪ್ಪನವರ ಮಾತುಗಳನ್ನು ನಾವು ಕೇಳಿದೆವು. ಬಹುಶಃ ಅದರ ಕಾನ್ಸಿಕ್ವೆನ್ಸ್ ಏನಾಗುತ್ತದೆ ಎನ್ನುವುದನ್ನು ಸದನ ಈಗ ಪೂರ್ಣ ಅರ್ಥ ಮಾಡಿಕೊಂಡಿತು ಎಂದು ನಾನು ಭಾವಿಸಿಕೊಳ್ಳುತ್ತೇನೆ. ಮಾನ್ಯ ಯಡಿಯೂರಪ್ಪನವರು ಹೇಳಿದಂತೆ ಒಮ್ಮೆ ನಾವು ಕಾನೂನು ಮಾಡಿದ ಮೇಲೆ ವಿಕೇಂದ್ರೀಕರಣದ ಬಗ್ಗೆ ನಮ್ಮ ಕಮಿಟ್‌ಮೆಂಟ್‌ನ್ನು ಸದನಗಳೇ ಎಕ್ಸ್‌ಪ್ರೆಸ್ ಮಾಡಿದ ಮೇಲೆ ವಿಕೇಂದ್ರೀಕರಣ ಕೇವಲ ಒಂದು ರಾಜಕೀಯ ಪಕ್ಷದ ತೀರ್ಮಾನವಾಗಿ ಉಳಿಯಲಿಲ್ಲ, ಇರಬಹುದು ಒಂದು ರಾಜಕೀಯ ಪಕ್ಷ ಹೆಚ್ಚು ದೃಢವಾಗಿ ಹೆಜ್ಜೆಯನ್ನು ಹಾಕಿರಬಹುದು, ಇನ್ನೊಂದು ಸ್ವಲ್ಪ ನಿಧಾನವಾಗಿ ಮುಂದುವರೆಯುತ್ತಿರಬಹುದು, ಆದರೆ ಒಟ್ಟಾರೆ ವಿಕೇಂದ್ರೀಕರಣದ ಬಗ್ಗೆ ನಾವು ಇಷ್ಟೆಲ್ಲಾ ಮಾಡಿದ ಮೇಲೆ ನಾವು ಈಗ ಅದನ್ನು ಪರ್ಮನೆಂಟ್ ಕಮಿಟಿ ಮಾಡುವುದನ್ನು ಮಾಡಿದರೆ ತಪ್ಪು ಭಾವನೆ ಬಂದಿತು, ಆದ್ದರಿಂದ ಇನ್ನೊಂದು ಅವಕಾಶದಲ್ಲಿ ಇದರ ಬಗ್ಗೆ ಚರ್ಚೆ ಮಾಡುವುದು ಒಳ್ಳೆಯದು. ಈಗೇನು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ ಅಷ್ಟಕ್ಕೇ ಅದನ್ನು ಕೈಬಿಡಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡುತ್ತೇನೆ.

**ಅಧ್ಯಕ್ಷರು:** ಈಗ ಮಾನ್ಯ ಸತ್ಯನಾರಾಯಣ್‌ರವರು ಮಾತನಾಡಿ.

**ಶ್ರೀ ಬಿ. ಸತ್ಯನಾರಾಯಣ್:** ಮಾನ್ಯ ಅಧ್ಯಕ್ಷರೇ,.....

**ಶ್ರೀ ಕೆ.ಆರ್. ರಮೇಶ್‌ಕುಮಾರ್ (ಶ್ರೀನಿವಾಸಪುರ):** ಮಾನ್ಯ ಅಧ್ಯಕ್ಷರೇ, ಅವರು ಉತ್ತರವನ್ನು ಹೇಳುವುದಕ್ಕೆ ಮೊದಲು ಕೆಲವು ವಿಷಯಗಳನ್ನು ನಮ್ಮ ಸ್ನೇಹಿತರು ಪ್ರಸ್ತಾಪ ಮಾಡಿದ್ದಾರೆ, ಕೆಲವು ವಿಷಯಗಳನ್ನು ಬಿಟ್ಟುಬಿಟ್ಟಿದ್ದಾರೆ,

ಒಂದು ನಿಮಿಷ ನನಗೆ ಅವಕಾಶ ಕೊಟ್ಟರೆ I have to make a submission, ನಮ್ಮಲ್ಲಿ ಏನಾಗಿದೆ ಎಂದರೆ ಮೊದಲು ಮುನ್ನೂರಾ ಐವತ್ತು ಅಡಿ ನಾಲ್ಕುನೂರಾ ಅಡಿಗೆ ನೀರು ಸಿಗುತ್ತಿತ್ತು. ಈಗ ಎಂಟುನೂರು ಅಡಿ ಒಂಬೈನೂರು, ಸಾವಿರ ಅಡಿಗೆ ಹೋಗಿದೆ, ಎಂಟುನೂರು ಒಂಬೈನೂರು ಅಡಿ ಆಳದಿಂದ ನೀರನ್ನು ತೆಗೆಯಲಿಕ್ಕೆ ಯಾವ ಹ್ಯಾಂಡ್ ಪಂಪ್ಸ್ ಇಲ್ಲ. ನೀವು ಪಂಪ್ ಮೋಟಾರ್ ಅನ್ನೇ ಉಪಯೋಗ ಮಡಬೇಕಾಗುತ್ತದೆ. ಇಲ್ಲಿ ವಿಧಾನ ಸೌಧದಲ್ಲಿ ಒಂದು ಅಭಿಪ್ರಾಯವೇನು ತಾಳುತಿದ್ದಾರೆಂದರೆ ನಾವು ಬರಗಾಲದ ನೆಪದಲ್ಲಿ ಸ್ಕೀಮ್ಸ್‌ನೆಲ್ಲಾ ನಡೆಸುತ್ತಿದ್ದೇವೆ, ನಾವು ಇದನ್ನು ತಾತ್ಕಾಲಿಕ ಪರಿಹಾರಕ್ಕಾಗಿ ಉಪಯೋಗ ಮಾಡುತ್ತಿಲ್ಲ. ಆದರೆ ನಮ್ಮ ಕಷ್ಟವನ್ನು ನೀವು ಅರ್ಥ ಮಾಡಿಕೊಳ್ಳಬೇಕು, ಯಾವುದೇ ಸ್ಕೀಂನಲ್ಲಿರತಕ್ಕ ಕೆಲಸವನ್ನು ತೆಗೆದುಕೊಂಡಿಲ್ಲ, ಇದೆಲ್ಲವೂ ಕೂಡ ಈಗ ಉದ್ಭವವಾಗಿರುವ ಪರಿಸ್ಥಿತಿಯನ್ನು ನಿಭಾಯಿಸಲಿಕ್ಕೆ ನಾವು ಮಾಡಿರತಕ್ಕದ್ದು. ಹೊಸದಾಗಿ ನಾವು ಕೊರೆದಿರತಕ್ಕ ಬೋರ್‌ವೆಲ್‌ಗಳು ಈಗ ಎರಡು ತಿಂಗಳುಗಳಾಗಿದೆ ಕೊರೆದು, ನೀರು ಬಂದಿದೆ, ನೀವು ಪಂಪ್ ಮೋಟಾರ್ ಯಾವಾಗ ಕೇಳಿದರೂ ಈಗ ಒಂದೂವರೆ ತಿಂಗಳಿನಿಂದ ಮೂರು ಕೋಟಿ ಬಿಡುಗಡೆಯಾಗಿದೆ, ಎಂದು ಹೇಳುತ್ತಿದ್ದೀರಿ. ಎರಡನೆಯ ಮಾತು ಏನು ಹೇಳುತ್ತೀರೆಂದರೆ, ಕೋಲಾರಕ್ಕೆ, ಅತಿ ಹೆಚ್ಚು ಹಣವನ್ನು ಕೊಟ್ಟಿದ್ದೇವೆಂದು, ನಾವು ಏನು ಮಾಡುವುದ? ಇಡೀ ರಾಜ್ಯದಲ್ಲಿ ಎಲ್ಲೂ ಇಲ್ಲದೆ ಇರತಕ್ಕ ಗ್ರಹಚಾರ, ದಾರಿದ್ರ್ಯ ದೌರ್ಭಾಗ್ಯ ಎಲ್ಲಾ ನಮ್ಮ ಮೇಲೆ ಬಂದು ಬಿದ್ದಿದೆ, ನಾಲ್ಕು ವರ್ಷ ಕಳೆದು ಐದನೇ ವರ್ಷಕ್ಕೆ ಬಂದಿದ್ದೇವೆ, ಒಂಬೈನೂರು ಅಡಿಗೆ ಹೋದರೂ ನೀರು ಸಿಗುತ್ತಿಲ್ಲ. ಈಗ ಎರಡನೇ ರೌಂಡ್ ಸಿಕ್ಕಿರತಕ್ಕ ನೀರು ಏನಾದರೂ ಇಂಗಿಹೋದರೆ ಆಮೇಲೆ ನಾವು ಊರೂರೇ ಗೊಳೆ ಎದ್ದು ಹೋಗಬೇಕಾಗುತ್ತದೆ. ನೀವು ಹಣ ಜಾಸ್ತಿ ಕೊಟ್ಟಿದ್ದೇನೆಂದರೆ ನಮ್ಮ ಬಾಯಾರಿಕೆಯನ್ನು ನಿವಾರಿಸುತ್ತೀರಾ? ಅಥವಾ ಕೊಟ್ಟ ಹಣದಿಂದ ನಮಗೆ ಇರತಕ್ಕ ದಾರಿದ್ರ್ಯವನ್ನು ಲೆಕ್ಕಾ ಹಾಕುತ್ತೀರಾ? ಈಗಾಗಲೇ ಎರಡು ತಿಂಗಳ ಮೇಲಾಗಿ ಬೋರ್‌ವೆಲ್ ಕೊರೆದಿರುವ ಹಣ ಬಾಕಿ ಇರುವುದು ಒಂದು ಕಡೆ ಇರಲಿ, ನೀರು ಕಾಣಿಸುತ್ತಿದೆ, ಆ ನೀರನ್ನು ಮೇಲೆಕ್ಕೆ ಎತ್ತಲಿಕ್ಕೆ ನೀವು ಪಂಪು, ಮೋಟಾರನ್ನು ಕೊಟ್ಟಿಲ್ಲ. ಯಾರಿಗೆ ಎಷ್ಟು ಯಾವ ಭಾಷೆಯಲ್ಲಿ ಹೇಳೀದರೂ ಕೂಡ ತಮ್ಮದೇ ಆದಂಥಹ ತರ್ಕಶಾಸ್ತ್ರವನ್ನು ನಮ್ಮ ಮುಂದೆ ಇಡುತ್ತಾರೆಯೆ

ಹೊರತು ನಮ್ಮ ನೋವು, ನಮ್ಮ ಕಷ್ಟ ನಿಮಗೆ ಅರ್ಥವಾಗುತ್ತಿಲ್ಲ. ಎಷ್ಟು ದಿವಸದೊಳಗೆ ಪಂಪು, ಮೋಟಾರ್ ಅಲ್ಲಿ ಕೊರೆದು ರೆಡಿಯಾಗಿರತಕ್ಕ ಬೋರ್‌ವೆಲ್‌ಗಳಿಗೆ ಅಳವಡಿಸುವುದಕ್ಕೆ ಕೂಡಿಸುವುದಕ್ಕೆ ಸಾಧ್ಯವಾಗುತ್ತದೆ? ದಯಮಾಡಿ ವಾರ್‌ಪುಟ್ಟಿಂಗ್‌ನಲ್ಲಿ ಕೆಲಸ ಮಾಡಿ, ಈಗೀಗ ಆಷಾಢದ ಗಾಳಿ ಬೇರೆ ಪ್ರಾರಂಭವಾಗಿದೆ, ಅಷ್ಟೋ ಇಷ್ಟೋ ಒಂದೆರಡು ಹನಿ ಬಿದ್ದಂತಹ ಕಡೆ ಕೂಡ ಪೂರ್ಣ ಎಲ್ಲಾ ತೇವಾಂಶ ಹೊರಟು ಹೋಗಿಬಿಟ್ಟಿದೆ. ನಾವು ನಿಮ್ಮನ್ನು ಕುಡಿಯುವ ನೀರಿಗಷ್ಟೆ ಕೇಳುತ್ತಿರುವುದು, ಇನ್ನೇನೂ ಕೇಳಲಿಲ್ಲ, ನಾವು ನಿಮಗೆ ಡ್ಯಾಂ ಕೊಡಿ ಎಂದು ಕೇಳಲಿಲ್ಲ, ಪ್ರಾಜೆಕ್ಟ್ ಕೇಳಲಿಲ್ಲ, ಫ್ಯಾಕ್ಟರಿ ಕೇಳಲಿಲ್ಲ, ನಿಮ್ಮ ಹಗೆಯ ಬರಹ ನಿಮ್ಮ ಸೌಭಾಗ್ಯವೇನೂ ಕೇಳಲಿಲ್ಲ, ಕಡೆಯ ಪಕ್ಷ ನಮ್ಮ ಜನರಿಗೆ ಕುಡಿಯುವ ನೀರನ್ನು ಕೊಟ್ಟು ಅಲ್ಲಿ ಕಾಣುತ್ತಿರತಕ್ಕ ಕುಡಿಯುವ ನೀರನ್ನಾದರೂ ಕುಡಿಯುವ ಆಸೆ ನಮಗೆ, ಅದೂ ಈಗ ಇಂಗಿಹೋಗಿಬಿಟ್ಟರೆ ಆಮೇಲೆ ನಮಗೇನೂ ಕೊಡಬೇಡಿ. ನಮ್ಮ ಕರ್ಮ ಹೇಗಿದ್ದರೆ ಹಾಗೇ ಇರುತ್ತದೆ, ಯಾವ ಊರಿಗಾದರೆ ಆ ಊರಿಗೆ ಹೊರಟು ಹೋಗುತ್ತೇವೆ ತಲೆಯ ಮೇಲೆ ಗಂಟನ್ನು ಇಟ್ಟುಕೊಂಡು, ದಯಮಾಡಿ ಆ ಪಂಪು ಮೋಟಾರನ್ನು ಯಾವಾಗ ಕೊಡಲು ಸಾಧ್ಯವಾಗುತ್ತದೆ?

**ಶ್ರೀ ಬಿ.ಸತ್ಯನಾರಾಯಣ (ಗ್ರಾಮೀಣ ನೀರು ಸರಬರಾಜು ಸಚಿವರು):** ಮಾನ್ಯ ಅಧ್ಯಕ್ಷರೇ, ಇವತ್ತು ಕುಡಿಯುವ ನೀರಿನ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಇತರ ಗೌರವಾನ್ವಿತ ಸದಸ್ಯರು ಎತ್ತಿರುವಂಥ ಚರ್ಚೆಯಾಗಲಿ ಎರಡು ಪ್ರಶ್ನೆ ಇದೆ, ಒಂದು, ಏನು ಹಿಂದೆ ತಾಲ್ಲೂಕು ತುರ್ತು ಪಡೆಯನ್ನು ಮಾಡಿದ್ದೆವು, ಅದನ್ನು ಮುಂದುವರೆಸಬೇಕು, ಎಂಬ ಬಗ್ಗೆ ಈಗಾಗಲೇ ಮುಖ್ಯಮಂತ್ರಿಗಳು ಮೂರು ತಿಂಗಳ ಅವಧಿಗೆ ಮುಂದುವರೆಸಲು ಒಪ್ಪಿಕೊಂಡಿದ್ದಾರೆ, ಎರಡನೆಯದಾಗಿ, ಹಿರಿಯರಾದಂಥ ಮಾನ್ಯ ರಮೇಶ್‌ಕುಮಾರ್‌ರವರು ಮತ್ತು ಇತರೆ ಸದಸ್ಯರುಗಳೂ ದುಡ್ಡಿನ ಬಗ್ಗೆ, ಹಣದ ಬಗ್ಗೆ ಬಿಡುಗಡೆಯಾಗಿಲ್ಲವೆಂಬ ಭಾವನೆಯನ್ನೇನು ವ್ಯಕ್ತಪಡಿಸಿದ್ದಾರೆ, ನಾನಾದರೂ ಹೇಳಲು ಇಚ್ಛೆಪಡುತ್ತೇನೆ, ಟಾಸ್ಕ್‌ಫೋರ್ಸ್ ಆದಮೇಲೆ ಉತ್ತಮವಾಗಿ ಕುಡಿಯುವ ನೀರಿನ ಕೊಳವೆಬಾವಿ ಕೊರೆದು ನೀರು ಕೊಡತಕ್ಕಂಥ ಕಾರ್ಯಕ್ರಮವನ್ನು ಸಾಧ್ಯವಾದಷ್ಟು ಮಟ್ಟಿಗೆ ಬಹುಪಾಲು ನಾವು ಈಡೇರಿಸುವಲ್ಲಿ ಯಶಸ್ವಿಯಾಗಿದ್ದೇವೆ, ಎಂಬ ಮಾತನ್ನು ಎಲ್ಲಾ ಸದಸ್ಯರು ಒಪ್ಪುತ್ತಾರೆಂದು

ನಾನಾದರೂ ಭಾವಿಸುತ್ತಾ ಈಗ ಹಣಕಾಸಿನ ಬಗ್ಗೆ 2005–06ನೇ ಸಾಲಿಗೆ ನಾವು ಕುಡಿಯುವ ನೀರಿಗೋಸ್ಕರ 580 ಕೋಟಿ ರೂಪಾಯಿಗಳನ್ನು ನಮ್ಮ ವಿವಿಧ ರಾಜ್ಯ ಕೇಂದ್ರದ ವಿದೇಶಿ ನೆರವಿನ ಯೋಜನೆಯಲ್ಲಿ ಗ್ರಾಮೀಣಾಭಿವೃದ್ಧಿ ಇಲಾಖೆಯಲ್ಲಿ ಹಣ ಕುಡಿಯುವ ನೀರಿನ ಬಾಬ್ತಿಗಾಗಿ ಮೀಸಲಿಟ್ಟು ಕೊಂಡಿದ್ದೇವೆ. ಈಗಾಗಲೇ ರಾಜ್ಯದ ಮತ್ತು ಕೇಂದ್ರ ವಲಯದ ಅಡಿಯಲ್ಲಿ 134.5 ಕೋಟಿ ರೂ.ಅನುದಾನವನ್ನು ಕುಡಿಯುವ ನೀರಿನ ಬಾಬ್ತಿಗಾಗಿ ಜಿಲ್ಲಾ ಪಂಚಾಯಿತಿಗಳಿಗೆ ಬಿಡುಗಡೆ ಮಾಡಿದ್ದೇವೆ, ಅದಲ್ಲದೆ ಕಂದಾಯ ಇಲಾಖೆಯಿಂದ ಸಿ.ಆರ್.ಎಫ್.ಅಡಿಯಲ್ಲಿ 2005–06ರಲ್ಲಿ 10.70 ಕೋಟಿ ರೂಪಾಯಿಗಳನ್ನು ಈ ವರ್ಷ ಬಿಡುಗಡೆ ಮಾಡಿದ್ದೇವೆ. 2005ರ ಮೇ ಅಂತ್ಯಕ್ಕೆ ಒಟ್ಟಾರೆ ವೆಚ್ಚ 18 ಕೋಟಿ ರೂ. ಮಾತ್ರ ಎಂದು ಜಿಲ್ಲಾ ಪಂಚಾಯತಿಗಳಿಂದ ನಮಗೆ ವರದಿ ಬಂದಿದೆ. ಹೀಗಾಗಿ ಇನ್ನೂ ಜಿಲ್ಲಾ ಪಂಚಾಯತಿಗಳಲ್ಲಿ 115.23 ಕೋಟಿ ರೂ. ಅನುದಾನ ಪೂರ್ಣಗೊಂಡು, ಮುಂದುವರೆದ ಕಾಮಗಾರಿಗಳು ಹಾಗೂ ಬಾಕಿ ಬಿಲ್ಲುಗಳಿಗಾಗಿ ಪಾವತಿಗೆ ಲಭ್ಯವಾಗಿದೆ.

**ಶ್ರೀ ಜೆ.ಸಿ. ಮಾಧುಸ್ವಾಮಿ:** ಅಲ್ಲಿ ಹಣವೇ ಇಲ್ಲ, ತುಮಕೂರು ಜಿಲ್ಲಾ ಪಂಚಾಯತಿಗೆ ಕೊಟ್ಟಿದ್ದಾರೆಯೇ? ಇದೇನು ಕತೆ ಕೇಳಿಕೊಂಡು ಕುಳಿತಿಕೊಳ್ಳಲು ಮಾಡಿದ್ದೀರಾ ನಮ್ಮನ್ನು? ಎಲ್ಲಿ ಹಣವನ್ನು ಕೊಟ್ಟಿದ್ದೀರಿ? ಸುಮ್ಮನೆ ಅಕಳಿ ಬೊಕಳಿ ಅಂತ ಹೇಳಿಕೊಂಡು. ಒಂದು ರೂಪಾಯಿ ದುಡ್ಡನ್ನು ಕೊಟ್ಟಿಲ್ಲ, ಇಲ್ಲಿ ಭಾಷಣ ಮಾಡಲು ಬಂದಿದ್ದಾರೆಯೆ? 115 ಕೋಟಿ ಇದೆ ಎಂದರೆ ಎಲ್ಲಿ ಇದೆ 115 ಕೋಟಿ? ಯಾವ ದುಡ್ಡಿದೆ ನಿಮ್ಮ ಹತ್ತಿರ ಹೇಳಿ? ಎರಡೂವರೆ ಮೂರು ಕೋಟಿ ರೂ ಕೆಲಸಕ್ಕೆ ಹಣವಿಲ್ಲವೆಂದು ಜಿಲ್ಲಾ ಪಂಚಾಯತಿಯ ಸಿ.ಇ.ಒ.ರವರು ಹೇಳುತ್ತಾರೆ. ಮಂತ್ರಿಗಳೇ ನಿಮ್ಮ ಜಿಲ್ಲೆಯದ್ದೇ ಮೂರು ಕೋಟಿ ರೂ ಬಾಕಿ ಇದೆ. ಎಫ್.ಡಿ. ಯದ್ದು ಎರಡೂವರೆ ಕೋಟಿ ಡಿ.ಸಿ. ಆಫೀಸಿನಲ್ಲಿ ಬಾಕಿ ಇದೆ.

**(ಗೊಂದಲ)**

**ಶ್ರೀ ವಾಟಾಳ್ ನಾಗರಾಜ್:** ದುಡ್ಡಿಲ್ಲ ದುಡ್ಡಿಲ್ಲ ದುಡ್ಡಿಲ್ಲ

**ಶ್ರೀ ಮಹದೇವ:** ಮಾನ್ಯ ಸಚಿವರೆ, ದಯವಿಟ್ಟು ಸದನವನ್ನು ತಪ್ಪುದಾರಿಗೆ ತೆಗೆದುಕೊಂಡು ಹೋಗಬೇಡಿ, ಟಾಸ್ಕ್‌ಫೋರ್ಸ್‌ಗೆ ಶಾಸಕರನ್ನು ಅಧ್ಯಕ್ಷರನ್ನಾಗಿ ಮಾಡಿದ್ದೀರಿ.....

**ಶ್ರೀ ವಾಟಾಳ್ ನಾಗರಾಜ್:** ನಮ್ಮಲ್ಲಿ ಐದು ಕೋಟಿ ರೂ ಬಾಕಿ ಇದೆ, ಆದರೆ ತಾವು ಇದೇನು ಹೀಗೆ ಹೇಳುತ್ತೀರಿ?

**ಶ್ರೀ ಜೆ.ವಿ. ಶ್ರೀರಾಮರೆಡ್ಡಿ:** ಬಾಕಿ ದುಡ್ಡೇ ಇಲ್ಲವೆಂದು ಹೇಳುತ್ತಿದ್ದಾರೆ.

**(ಗೊಂದಲ)**

**ಶ್ರೀ ಆರಗ ಜ್ಞಾನೇಂದ್ರ:** ಜಿಲ್ಲಾ ಪಂಚಾಯತಿ ಕಾರ್ಯದರ್ಶಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಏಕೆಂದರೆ

**(ಗೊಂದಲ)**

(ಅನೇಕ ಸದಸ್ಯರುಗಳು ಏಕಕಾಲದಲ್ಲಿ ಮಾತನಾಡಿದರು)

**ಶ್ರೀ ಜೆ.ವಿ. ಶ್ರೀರಾಮರೆಡ್ಡಿ:** ನನ್ನ ತಾಲ್ಲುಕು ಒಂದರಲ್ಲೇ ಟ್ರಾನ್ಸ್‌ಪೋರ್ಟ್ ಮಾಡಿರತಕ್ಕದ್ದೇ 76 ಲಕ್ಷ ರೂ ಬಾಕಿ ಇದೆ. ಮೊನ್ನೆ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಚರ್ಚೆ ನಡೆದಿದೆ, ನನ್ನ ಒಂದೇ ತಾಲ್ಲುಕಿನಲ್ಲಿ ಟ್ರಾನ್ಸ್‌ಪೋರ್ಟ್ ಟೆಸ್ಟ್ ಮಾಡಿತಕ್ಕದ್ದೇ ಆರು ತಿಂಗಳಿಂದ 76 ಲಕ್ಷ ರೂ ಬಾಕಿ ಇದೆ.

**ಶ್ರೀ ಆರಗ ಜ್ಞಾನೇಂದ್ರ:** ಕೆಲಸ ಮಾಡಿದವರಿಗೆ ಹಣವನ್ನೇ ಕೊಟ್ಟಿಲ್ಲ. ಜಿಲ್ಲಾ ಪಂಚಾಯತಿಯಲ್ಲಿ ಬಿಲ್ಲು ಪೆಂಡಿಗ್ ಇದೆ. ನಿಮ್ಮ ಹಣವನ್ನು ಇಟ್ಟುಕೊಂಡು ಅವರೇನು ಮಾಡುತ್ತಿದ್ದಾರೆ?

**(ಗೊಂದಲ)**

**ಶ್ರೀ ಜೆ.ವಿ. ಶ್ರೀರಾಮರೆಡ್ಡಿ:** ಇದು ಯಾವ್ಯಾವುದೋ ಅಂಕಿ ಅಂಶವನ್ನು ಕೊಡತಕ್ಕದ್ದು, ಯಾವ್ಯಾವುದೋ ಯೋಜನೆಯಲ್ಲಿರತಕ್ಕ ಹಣವನ್ನು....

**(ಗೊಂದಲ)**

**ಶ್ರೀ ಆರಗ ಜ್ಞಾನೇಂದ್ರ:** ಮಂತ್ರಿಗಳ ಈ ಸ್ಟೇಟ್‌ಮೆಂಟ್ ಪತ್ರಿಕೆಗಳಲ್ಲಿ ಹೋಗುತ್ತದೆ. ಜನರು ನಮ್ಮನ್ನು ಅನುಮಾನದಿಂದ ನೋಡುತ್ತಿದ್ದಾರೆ.

**(ಗೊಂದಲ)**

**ಅಧ್ಯಕ್ಷರು:** ದಯಮಾಡಿ ಎಲ್ಲರೂ ಕುಳಿತುಕೊಳ್ಳಬೇಕು.

**ಶ್ರೀ ಮಹದೇವ್:** ತಾವು ದಯವಿಟ್ಟು ನಮ್ಮ ಮಾತನ್ನೂ ಕೂಡ ಆಲಿಸಬೇಕು.

**(ಗೊಂದಲ)**

**ಶ್ರೀ ವಾಟಾಳ್ ನಾಗರಾಜ್:** ತಾವು ಎದೆ ತಟ್ಟಿ ಹೇಳಿ.

**(ಗೊಂದಲ)**

**ಶ್ರೀ ಎ. ಪಾಪರೆಡ್ಡಿ;** ಅವರು ಬರಿ ಸುಳ್ಳು ಹೇಳುತ್ತಿದ್ದಾರೆ. ಎಲ್ಲೂ ಹಣವಿಲ್ಲ. ಜಿಲ್ಲಾದಿಕಾರಿಗಳ ಹತ್ತಿರ ಇಲ್ಲ.

**(ಗೊಂದಲ)**

**ಅಧ್ಯಕ್ಷರು:** ದಯಮಾಡಿ ಎಲ್ಲರೂ ಕುಳಿತುಕೊಳ್ಳಿ, ತಾವುಗಳು ಈ ರೀತಿ ನಡೆದುಕೊಂಡರೆ ಹೇಗೆ? ಎಷ್ಟು ಸಲ ಹೇಳಿದರೂ ಅಷ್ಟೆಯಲ್ಲಾ ನಿಮಗೆ?

**(ಗೊಂದಲ)**

**ಶ್ರೀ ಬಿ.ಎಸ್. ಯಡಿಯೂರಪ್ಪ;** ಮಾನ್ಯ ಅಧ್ಯಕ್ಷರೆ, ತಮ್ಮ ಮೂಲಕ ಸಚಿವರಲ್ಲಿ ಒಂದೇ ವಿನಂತಿ ಮಾಡುವುದು. ಬಹಳ ಜವಾಬ್ದಾರಿಯುತವಾದ ಸ್ಥಾನದಲ್ಲಿ ನಾವು ನೀವೆಲ್ಲಾ ಇಲ್ಲಿ ಕುಳಿತಿದ್ದೇವೆ. ಈ ಭಾಗದಲ್ಲಿ ಮತ್ತು ಆ ಭಾಗದಲ್ಲಿರುವಂಥ ಕೆಲವು ಸದಸ್ಯರು ಹೇಳುತ್ತಿದ್ದಾರೆ. ಕೆಲವು ಟಾಸ್ಕ್‌ಫೋರ್ಸ್ ಗಳಲ್ಲಿ ನಾವೇನು ಕೆಲಸ ಮಾಡಿಸಿದ್ದೇವೆ, ಕೆಲಸ ಪೂರ್ತಿಯಾಗಿದೆ. ತಿಂಗಳು ಗಟ್ಟಲೆ ಕಳೆದರೂ ಹಣ ಪಾವತಿಯಾಗಿಲ್ಲ. ಎನ್ನುವಂಥ ನೇರವಾದ ಅಂಕಿ ಅಂಶಗಳನ್ನು ನಾವು ಕೊಡುತ್ತಿದ್ದೇವೆ. ಜವಾಬ್ದಾರಿಯಿರತಕ್ಕ ಶಾಸಕರು ಅಧ್ಯಕ್ಷರಾಗಿರತಕ್ಕವರು ಈ ವಿವರಗಳನ್ನು ಕೊಡುತ್ತಿದ್ದೇವೆ. ದಯಮಾಡಿ ತಾವು ಪ್ರತಿಯೊಂದು ಜಿಲ್ಲೆಯಿಂದ ಅಂಕಿ ಅಂಶವನ್ನು ತರಿಸಿಕೊಂಡು ನೀವು ಇಷ್ಟಾದರೂ ಭರವಸೆ ಕೊಡಿ, ಯಾವ್ಯಾವ ತಾಲ್ಲೂಕಿನಲ್ಲಿ ಬಾಕಿ ಇದೆ, ಕೆಲಸ ಮಾಡಿ ಮುಗಿಸಿದ್ದಾರೆ ಆ ಹಣವನ್ನು ಬಿಡುಗಡೆ ಮಾಡುತ್ತೇನೆ, ಅದು ಎಷ್ಟೇ ಇದ್ದರೂ ಬಿಡುಗಡೆ ಮಾಡುತ್ತೇನೆಂದು ಹೇಳಲು ಏನು ಸ್ವಾಮಿ? ಇಲ್ಲಿ ಚರ್ಚೆ ಮಾಡುತ್ತೇವೆಂದರೆ ನಾಳೆ ಪತ್ರಿಕೆಯಲ್ಲಿ ಬಂದದ್ದನ್ನು ಜನರು ಏನೆಂದು ಕೊಳ್ಳಬೇಕು? ಬಿಡುಗಡೆಯಾಗಿಲ್ಲ ಎಂದು ನಾವು, ಬಿಡುಗಡೆ ಮಾಡಿದ್ದೇವೆ ಎಂದು ನೀವು, ಅಲ್ಲಿ ಸಂಬಂಧಪಟ್ಟ ಚೀಫ್ ಸೆಕ್ರೆಟರಿ ಹತ್ತಿರ ದುಡ್ಡಿದೆ ಆದರೆ ಅವರು ದುಡ್ಡೆ ಕೊಟ್ಟಿಲ್ಲವೆಂದರೆ ಅವರೇನು ಆಟ ಆಡುತ್ತಿದ್ದಾರೆಯೇ? ದುಡ್ಡಿದ್ದು ಕೆಲಸವಾಗಿದ್ದರೂ ಹಣ ಬಿಡುಗಡೆ ಮಾಡಿಲ್ಲ. ಅಂಥ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ನಮಗೆ ಭರವಸೆಯನ್ನು ಕೊಡಿ.

ಶ್ರೀ **ಮಹದೇವ:** ಅವರು ರಿಪ್ಲೈ ಕೊಡುವುದಕ್ಕಿಂತ ಮುಂಚೆ ನನ್ನದೊಂದು ಸಬ್‌ಮಿಷನ್ ಇದೆ. ಪ್ರಾಯಶಃ ಅದನ್ನು ಇಡೀ ಸಭೆ ಒಪ್ಪಿಕೊಳ್ಳುತ್ತದೆಂದು ನಾನು ಭಾವಿಸುತ್ತೇನೆ. ಏನೆಂದರೆ ನಾವೆಲ್ಲರೂ ಶಾಸಕರೂ ಕೂಡ ಟಾಸ್ಕ್‌ಫೋರ್ಸ್ ಸಮಿತಿಯ ಅಧ್ಯಕ್ಷರು ಆದರೆ ನಾವು ಮಾಡಿರುವ

ಶಿಪಾರಸ್ಸುಗಳಿಗೆ ಸಿಇಒರವರು ಎಷ್ಟೆಷ್ಟು ಕತ್ತರಿ ಹಾಕಿದ್ದಾರೆಂಬುದನ್ನು ಕೇಳ, ಇದು ನಮ್ಮೆಲ್ಲರ ಅನುಭವ.

**ಶ್ರೀ ಎ. ಪಾಪರೆಡ್ಡಿ:** ಸಮಿತಿಯಲ್ಲಿ ನಾವು ಶೀಪಾರಸ್ಸು ಮಾಡಿ ಕೊಟ್ಟಿರುವ ವಿಚಾರಗಳನ್ನು ಸಿಇಒರವರು ಒಪ್ಪುತ್ತಿಲ್ಲ.

**ಅಧ್ಯಕ್ಷರು:** ಈಗ ಮಾನ್ಯ ಸಚಿವರು ಉತ್ತರಿಸಲು ಬಿಡಿ. ಸುಮ್ಮನೆ ಏಕೆ ಈ ರೀತಿ ಮಾತನಾಡುತ್ತಿದ್ದೀರಿ? ಮಾನ್ಯ ಮಂತ್ರಿಗಳು ಉತ್ತರಿಸಲಿ. ದಯಮಾಡಿ ಕುಳಿತುಕೊಳ್ಳಿ.

**ಶ್ರೀ ಮಹದೇವ:** ಮಾನ್ಯ ಸಭಾಧ್ಯಕ್ಷರೇ, ಇದು ಬಹಳ ಗಂಭೀರ ವಿಚಾರವಾಗಿದ್ದು ಮಾನ್ಯ ಸಚಿವರು ಉತ್ತರಿಸಬೇಕಾದರೆ, ಟಾಸ್ಕ್‌ಫೋರ್ಸ್‌ನ ಜವಾಬ್ದಾರಿ ಏನು? ಟಾಸ್ಕ್‌ಫೋರ್ಸ್ ನ ಅಧ್ಯಕ್ಷಗಿರಿ ವಹಿಸಿಕೊಂಡಿರುವ ಶಾಸಕರುಗಳಿಗೆ ಸಮಿತಿಯಲ್ಲಿ ಏನು ಸ್ಥಾನವಿದೆ? ಸಿಇಒರವರಿಗೆ ಓವರ್ ರೈಡಿಂಗ್ ಪವರ್ಸ್ ಅನ್ನು ಏಕೆ ಕೊಟ್ಟಿದ್ದಾರೆ? ಟಾಸ್ಕ್‌ಫೋರ್ಸ್ ಕಮಿಟಿ ರಚನೆಯಾದ ಬಳಿಕ ನಾವು ಕೊಟ್ಟಿರುವ ಶಿಫಾರಸ್ಸುಗಳ ಬಗ್ಗೆ ಸಿಇಒರವರು ಓವರ್ ರೈಡಿಂಗ್ ಪವರ್ಸ್ ಅನ್ನು ಏಕೆ ಕೊಟ್ಟಿದ್ದಾರೆ? ಟಾಸ್ಕ್‌ಫೋರ್ಸ್ ಕಮಿಟಿ ರಚನೆಯಾದ ಬಳಿಕ ನಾವುಕೊಟ್ಟಿರುವ ಶಿಫಾರಸ್ಸುಗಳ ಬಗ್ಗೆ ಸಿಇಒರವರು ಓವರ್ ರೈಡ್ ಮಾಡುವುದಾದರೆ what is the useof Task Force? It is a serious matter

(ಗೊಂದಲ)

**ಶ್ರೀ ಹೆಚ್.ಡಿ. ಬಸವರಾಜು:** ಅದೊಂದೇ ಕ್ಷೇತ್ರವಲ್ಲ, ನನ್ನ ಕ್ಷೇತ್ರದಲ್ಲೂ ಅದೇ ರೀತಿ ಆಗಿದೆ. ಎಲ್ಲಾ ಕ್ಷೇತ್ರಗಳಲ್ಲೂ ಆ ರೀತಿಯಾಗಿದೆ. ಹಾಗಾದರೆ ಸಮಿತಿಯಲ್ಲಿ ಶಾಸಕರಾದವರು ಏಕಿರಬೇಕು? ಸಿಇಒರವರಿಗೆ ಯಾವ ರೀತಿಯ ಆದೇಶ ಕೊಟ್ಟಿದ್ದಾರೆಂಬುದು ನಮಗೆ ಅರ್ಥವಾಗುತ್ತಿಲ್ಲ. ಶಾಸಕರು ಟಾಸ್ಕ್‌ಫೋರ್ಸ್ ಸಮಿತಿಯ ಅಧ್ಯಕ್ಷರಾಗಿ ಪಟ್ಟಿ ಸಿದ್ಧಪಡಿಸಿಕೊಟ್ಟ ನಂತರ ಅದರಲ್ಲಿ ಸಿಇಒರವರ ಹಸ್ತಕ್ಷೇಪ ಏಕಿರಬೇಕು? ತಾವು ಸಿಇಒರವರ ಮೇಲೆ ಕ್ರಮ ಕೈಗೊಳ್ಳಲೇಬೇಕು.

(ಹಲವಾರು ಮಾನ್ಯ ಸದಸ್ಯರುಗಳು ಒಟ್ಟಿಗೆ ಎದ್ದು ನಿಂತು ಮಾತನಾಡುತ್ತಿದ್ದರು.)

**ಅಧ್ಯಕ್ಷರು:** ಮಾನ್ಯ ಸದಸ್ಯರುಗಳು ಈ ರೀತಿ ವರ್ತಿಸಿದರೆ ಸಭೆ ನಡೆಸಲು ಸಾಧ್ಯವಾಗುವುದಿಲ್ಲ. ನಮ್ಮ ಅನುಮತಿ ತೆಗೆದುಕೊಂಡು ನೀವು

ಮಾತನಾಡಬೇಕು. ಎಲ್ಲರೂ ನಿಮಗಿಷ್ಟ ಬಂದ ರೀತಿಯಲ್ಲಿ ಮಾತನಾಡುತ್ತಿದ್ದೀರಿ, ಇದೇನಿದು? ಈಗ ನಾನು ಮಾನ್ಯ ಸಚಿವರನ್ನು ಉತ್ತರಿಸಲು ಕರೆದಿದ್ದೇನೆ. ಅವರು ಉತ್ತರ ಹೇಳಿ ಮುಗಿಸಲಿ. ನಂತರ ನೀವು ನನ್ನ ಅನುಮತಿ ತೆಗೆದುಕೊಂಡು ಮತನಾಡಬೇಕು. ಎಲ್ಲರೂ ಈ ರೀತಿ ನಿಂತುಕೊಂಡು ಮಾತನಾಡಿದರೆ ಹೇಗೆ? ಮಾನ್ಯ ಸತ್ಯನಾರಾಯಣ ಅವರು ದಯಮಾಡಿ ಉತ್ತರ ಕೊಡಿ.

**ಶ್ರೀ ಬಿ.ಆರ್. ಪಾಟೀಲ್:** ಮಾನ್ಯ ಅಧ್ಯಕ್ಷರೇ, ದಯಮಾಡಿ ನನಗೆ ಒಂದು ನಿಮಿಷ ಮಾತನಾಡಲು ಅವಕಾಶ ಕಲ್ಪಿಸಿಕೊಡಬೇಕು.

**ಅಧ್ಯಕ್ಷರು:** ತಾವು ದಯಮಾಡಿ ಕುಳಿತುಕೊಳ್ಳಿ, ನಾನು ಮಾನ್ಯ ಸಚಿವರನ್ನು ಮಾತನಾಡಲು ಕರೆದಿದ್ದೇನೆ, ಆನಂತರ, ತಾವು ಮಾತನಾಡಿ.

**ಶ್ರೀ ಬಿ.ಆರ್. ಪಾಟೀಲ್:** ನಾನು ಅನಾವಶ್ಯಕವಾಗಿ ನಿಲ್ಲುವುದಿಲ್ಲ. ದಯಮಾಡಿ ನನಗೆ ಮಾತನಾಡಲು ಅವಕಾಶ ಕಲ್ಪಿಸಿಕೊಡಬೇಕು.

**ಅಧ್ಯಕ್ಷರು:** ಪಾಟೀಲರೇ, ತಾವು ದಯಮಾಡಿ ಕುಳಿತುಕೊಳ್ಳಬೇಕು.

**ಶ್ರೀ ಬಿ.ಆರ್. ಪಾಟೀಲ್:** ಇಲ್ಲ ನಾನು ಮಾತನಾಡಲೇ ಬೇಕು. ಸಮಸ್ಯೆ ಗಂಭೀರತೆ ಬಗ್ಗೆ ತಿಳಿಸಬೇಕಾಗಿದೆ.

(ಹಲವಾರು ಮಾನ್ಯ ಸದಸ್ಯರುಗಳು ಒಟ್ಟಿಗೆ ಎದ್ದು ನಿಂತು ಮಾತನಾಡುತ್ತಿದ್ದರು)

**ಅಧ್ಯಕ್ಷರು:** ಈಗ ಗೋಡಾ ಹೈ ಮೈದಾನ್ ಹೈ ಏನು ಬೇಕಾದರೂ ಮಾತನಾಡಿಕೊಳ್ಳಿ ಈ ಸಭೆಗೆ ಏನಾದರೂ ಪಾವಿತ್ರ್ಯತೆ ಇದೆಯೇ? ಎಲ್ಲರೂ ಎದ್ದು ನಿಂತುಕೊಂಡು ಮಾತನಾಡುತ್ತಿದ್ದೀರಿ. ನಾವೇನಾದರೂ ಹೇಳಿದರೆ ನೀವು ನಮ್ಮನ್ನೇ ಪ್ರಶ್ನಿಸುತ್ತೀರಿ. ಈ ಸಭೆಗೇನಾದರೂ ಪಾವಿತ್ರ್ಯತೆ ಇದೆಯೇ?

**ಶ್ರೀ ಬಿ.ಆರ್. ಪಾಟೀಲ್:** ನೀವು ನಮ್ಮ ಕಡೆ ನೋಡುವುದಿಲ್ಲ. ಇತ್ತ ಕಡೆ ಕುಳಿತಿರುವವರಿಗೆ ಮಾತನಾಡಲು ಅವಕಾಶವೇ ಸಿಗುವುದಿಲ್ಲ.

**ಅಧ್ಯಕ್ಷರು:** ಮಾನ್ಯ ಸಚಿವರು ಉತ್ತರ ಕೊಟ್ಟ ನಂತರ ಒಬ್ಬರಾದ ಬಳಿಕ ಒಬ್ಬರು ಮಾತನಾಡಿ ಎಂದರೂ ಅದಕ್ಕೂ ನಿಮಗೆ ಸಹನೆ ಇಲ್ಲ?

**ಶ್ರೀ ಬಿ.ಆರ್. ಪಾಟೀಲ್ (ಚಿಂಚೋಳಿ) :** ಈಗ ಮಾನ್ಯ ಸದಸ್ಯರಾದ ಮಹದೇವರವರು ಒಂದು ಸಮಸ್ಯೆ ಪ್ರಸ್ತಾಪಿಸಿದ್ದಾರೆ. ಈ ವಿಷಯವನ್ನು ನಾನು ಮಾನ್ಯ ಮಂತ್ರಿಗಳ ಬಳಿಗೆ ಹೋಗಿ ತಿಳಿಸಿದೆ. ಈ ಟಾಸ್ಕ್‌ಫೋರ್ಸ್ ಸಮಿತಿಗೆ

ಯಾವುದೇ ಬೆಲೆ ಇಲ್ಲ. ಸಮಿತಿಯಲ್ಲಿ ನಾವು ಕೈ ಗೊಳ್ಳುವ ನಿರ್ಣಯಗಳಿಗೆ ಸಿಇಓರವರು ಯಾವುದೇ ಮನ್ನಣೆ ನೀಡುತ್ತಿಲ್ಲ. ಹೀಗಾಗಿ, ನಮ್ಮ ಕೆಲಸ ಕಾರ್ಯಗಳು ಆಗುತ್ತಿಲ್ಲವೆಂದು ಮಾನ್ಯ ಮಂತ್ರಿಗಳಿಗೆ ಎರಡು ಸಲ ಈ ವಿಷಯ ತಿಳಿಸಿ ವಿಂತಿಸಿಕೊಂಡಿದ್ದೇವೆ. ಇಷ್ಟಾದರೂ ಕೂಡ ಸಮಸ್ಯೆ ಬಗೆ ಹರಿದಿಲ್ಲ, ಈಗ ಬೇಸಿಗೆ ಕಳೆದು ಮಳೆಗಾಲ ಶುರುವಾಗಿದ್ದರೂ ಕುಡಿಯುವ ನೀರಿಗೆ ನಾವು ಇನ್ನೂ ವ್ಯವಸ್ಥೆ ಮಾಡುವುದಕ್ಕಾಗುವುದಿಲ್ಲ. It is the shame on the part of the Task Force Committee. ಇದು ಎಂಎಲ್ಎಗಳಿಗೆ ಮಾಡಿರುವ ಅಪಮಾನ. ಟಾಸ್ಕ್ಫೋರ್ಸ್ ಸಮಿತಿ ರಚಿಸಿದ್ದೇವೆ, ಇವರೆಲ್ಲರೂ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಿಕೊಡುತ್ತಾರೆ ಎಂದು ಸುಮ್ಮನೆ ಜನತೆ ಎದುರಿಗೆ ಹೇಳಿದಿರಿ. ಅಲ್ಲಿಗೆ ಹೋಗಿ ಸಮಿತಿಯಲ್ಲಿ ನಾವು ನಿರ್ಣಯ ಕೈಗೊಂಡು ವರದಿ ಕಳುಹಿಸಿ ಕೊಟ್ಟರೆ, ಯಾವ ಸಿಇಒ ಕೂಡ ಸಮಿತಿಯ ನಿರ್ಣಯಗಳಿಗೆ ಮಾನ್ಯತೆ ನೀಡಿಲ್ಲ. ಇದು ನಮ್ಮ ಶಾಸಕರ ಗತಿಯಾಗಿದೆ. ಆದರೆ ತಾವು ಜನತೆಗೆ ಏನು ಸಂದೇಶ ಕೊಟ್ಟಿದ್ದೀರಿ, ಶಾಸಕರುಗಳಿಗೆ ನಾವು ಅಧಿಕಾರ ಕೊಟ್ಟಿದ್ದೇವೆ, ಅವರೆಲ್ಲರೂ ನಿಮ್ಮ ಸಮಸ್ಯೆ ಬಗೆಹರಿಸುತ್ತಾರೆ, ಎಂದಿದ್ದೀರಿ. ಶಾಸಕರುಗಳನ್ನು ಈ ರೀತಿ ಅಪರಾಧಿ ಸ್ಥಾನದಲ್ಲಿ ನಿಲ್ಲಿಸುವಂಥಾಗಬಾರದು. ಈ ವಿಷಯವನ್ನು ನಾನು ಮಾನ್ಯ ಮಂತ್ರಿಗಳಿಗೆ ವೈಯಕ್ತಿಕವಾಗಿ ತಿಳಿಸಿದ್ದೇನೆ. I am sorry.

(ಗೊಂದಲ)

**ಅಧ್ಯಕ್ಷರು:** ದಯಮಾಡಿ ಕುಳೀತುಕೊಳ್ಳಿ. ಮಾನ್ಯ ಸಚಿವರು ಮಾತನಾಡಲು ಅವಕಾಶ ಮಾಡಿಕೊಡಿ. ಈಗ ಸದನದಲ್ಲಿ ಸಚೇತಕರಿಲ್ಲ, ನಾಯಕರಿಲ್ಲ, ಖರ್ಗೆಯವರೆ, ನೀವು ಹಿರಿಯ ಮಂತ್ರಿಗಳಾಗಿದ್ದೀರಿ, ನೀವು ನಿಮ್ಮ ನಾಯಕರು ಹಾಗೂ ಉಪನಾಯಕರುಗಳಿಗೆ ತಿಳಿಸುವ ಮೂಲಕ ಅವರು ಇದನ್ನೆಲ್ಲಾ ನಿಯಂತ್ರಿಸಬೇಕು, ಸಭೆಯನ್ನು ಈ ರೀತಿ ನಡೆಸಲು ನಾನು ಇಷ್ಟ ಪಡುವುದಿಲ್ಲ. ತಮಗೆ ಇಷ್ಟ ಬಂದ ರೀತಿಯಲ್ಲಿ ಮಾಡಿಕೊಳ್ಳಿ. ಆಡಳಿತ ಪಕ್ಷದ ಸದಸ್ಯರುಗಳಿಗೆ ವಿಶೇಷವಾದ ಜವಾಬ್ದಾರಿ ಇರುತ್ತದೆ. ಏನಿದು? ಸಭೆ ನಡೆಸಬೇಕೆ? ಬಿಡಬೇಕೆ? ಈ ಸಭೆಯ ಗೌರವ ಉಳಿಯಬೇಕೆ? ಬೇಡವೆ? No this is too much

ಸತ್ಯನಾರಾಯಣರವರೇ ಮಾತನಾಡಿ

**ಶ್ರೀ ಬಿ ಸತ್ಯನಾರಾಯಣ (ಗ್ರಾಮೀಣ ನೀರು ಸರಬರಾಜು ಸಚಿವರು):** ಸನ್ಮಾನ್ಯ ಅಧ್ಯಕ್ಷರೇ, ಹಣ ಇದೆ, ನಾವು ಈಗಾಗಲೇ ಜಿಲ್ಲಾ ಪಂಚಾಯತ್‌ಗಳಿಗೆ 115.23 ಕೋಟಿ ರೂಪಾಯಿಗಳಷ್ಟು ಹಣ ಬಿಡುಗಡೆ ಮಾಡಿದ್ದೇವೆ. ಕಾರ್ಯಪಡೆಗಳೂ ಮಾಡಿರುವ ಕೆಲಸ ಕಾರ್ಯಗಳಿಗೆ ಹಣ ನಿಜವಾಗಿಯೂ ತಲುಪಬೇಕಾದರೆ, ಯಾರು ಬೋರ್‌ವೆಲ್ ಕೊರೆದಿದ್ದಾರೆ, ಮೋಟಾರು ಪಂಪುಗಳನ್ನು ಪರ್ಚೇಸ್ ಮಾಡಿದ್ದಾರೆ, ಅವರಿಗೆ ಸಕಾಲದಲ್ಲಿ ಹಣ ತಲುಪಲು ಕೆಲವು ತಾಂತ್ರಿಕ ತೊಂದರೆಗಳಿಂದ ತಡವಾಗಿದೆಯೇ ವಿನಾ ದುಡ್ಡು ಇಲ್ಲವೆಂಬ ಕಾರಣಕ್ಕಾಗಿ ತಡವಾಗಿಲ್ಲ. ಈಗ ಕೊರೆದ ಬೋರ್‌ವೆಲ್‌ಗಳಿಗೆ ನಾಳೆ ಬೆಳಿಗ್ಗೆ ದುಡ್ಡು ಕೊಡುವುದಕ್ಕೆ ಕೆಲವು ಕಾನೂನು ಕ್ರಮಗಳನ್ನು ಅನುಸರಿಸಬೇಕಾಗುತ್ತದೆ. ಅವರು ಬೋರ್‌ವೆಲ್ ಕೊರೆದ ಬಗ್ಗೆ ಬಿಲ್ ಕೊಡಬೇಕಾಗುತ್ತದೆ. ಅದನ್ನು ಎಕ್ಸಿಕ್ಯೂಟಿವ್ ಇಂಜಿನಿಯರ್, ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್, ಮತ್ತು ಸಿಇಓರವರಿಗೆ ಕೊಡಬೇಕಾಗುತ್ತದೆ. ಬಿಲ್ಲನ್ನು ಸಿಇಓರವರು ಪಾಸ್ ಮಾಡಬೇಕಾಗುತ್ತದೆ. ಇದಕ್ಕಾಗಿ ಒಂದೆರಡು ತಿಂಗಳು ವಿಳಂಬವಾಗುತ್ತದೆಯೇ ವಿನಾ ನಾವು ದುಡ್ಡಿಲ್ಲವೆನ್ನುವ ಕಾರಣಕ್ಕೋಸ್ಕರ, ದುಡ್ಡಿಲ್ಲವೆಂದು ಹೇಳುವಂತಹ ಸಂದರ್ಭ, ಪ್ರಶ್ನೆ ಅವಕಾಶ, ಉದ್ಭವಿಸುವುದಿಲ್ಲ. ಈ ರೀತಿ ಯಾರಾದರೂ ಹೇಳಿದರೆ ಅದು ತಪ್ಪಾಗುತ್ತದೆ. ಅವರ ಮೇಲೆ ನಾವು ಸೂಕ್ತ ಕ್ರಮ ಕೈಗೊಳ್ಳುತ್ತೇವೆ. ಸಾಕಷ್ಟು ಹಣವಿದೆ. ಇವತ್ತಿನವರೆಗೆ 115.23 ಕೋಟಿ ರೂ ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳಲ್ಲಿ ಹಣ ಇದೆ. ಇದುವರೆಗೂ ಕುಡಿಯುವ ನೀರಿಗೆ ಸಂಬಂಧಿಸಿದಂತೆ ಸುಮಾರು 40 ಕೋಟಿ ರೂಪಾಯಿಗಳಷ್ಟು ಬಿಲ್ಲುಗಳಿಗೆ ಪಾವತಿ ಮಾಡಬೇಕಾಗಿದೆ ಎಂದು ಸರ್ಕಾರದ ಗಮನಕ್ಕೆ ತಂದು ಒಂದು ವರದಿ ಕೊಟ್ಟಿದ್ದಾರೆ. ಈ ವೆಚ್ಚ ಭರಿಸಲು ಜಿಲ್ಲಾ ಪಂಚಾಯತ್‌ಗಳಿಗೆ ನಾವು ಸೂಚನೆ ಕೊಟ್ಟಿದ್ದೇವೆ. ಇನ್ನು ಮುಂದೆ ಕೊರೆಸುವ ಯಾವುದೇ ಕೊಳವೆಬಾವಿಗಳಿಗೆ ಸಂಬಂಧಿಸಿದ ಬಿಲ್ಲುಗಳಿದ್ದರೂ ಶಾಸಕರುಗಳು ಹಣ ಕುರಿತಂತೆ ಚಿಂತೆ ಪಡಬೇಕಾಗಿಲ್ಲ. ಹಣ ಕೊಡುವ ಜವಾಬ್ದಾರಿ ಸರ್ಕಾರದ್ದಾಗಿದೆ.

**ಶ್ರೀ ಮಹದೇವ:** ಇದೊಂದು ತಪ್ಪು ಮಾಹಿತಿ, ಸುಳ್ಳು, ಇದು ಹಸಿ ಸುಳ್ಳು.

**ಅಧ್ಯಕ್ಷರು:** ತಾವು ದಯಮಾಡಿ ಕುಳಿತುಕೊಳ್ಳಬೇಕು. ಮಾನ್ಯ ಸಚಿವರು ಉತ್ತರ ಕೊಟ್ಟು ಮುಗಿಸಲಿ. ಏಕೆ ಈ ರೀತಿ ಮಾತನಾಡುತ್ತಿದ್ದೀರಿ?

**ಶ್ರೀ ಮಹದೇವ:** ಮೈಸೂರಿನಲ್ಲಿ ಸುಮಾರು 80 ಬೋರ್‌ವೆಲ್‌ಗಳಿಗೆ ಸಂಬಂಧಿಸಿದಂತೆ ಸಮಿತಿಯ ಮೂಲಕ ಶಿಪಾರಸ್ಸು ಮಾಡಿ ಕಳುಹಿಸಿ ಕೊಟ್ಟಿದ್ದರೂ, ದುಡ್ಡಿಲ್ಲವೆಂದು ಸಿಇಓರವರು ವಾಪಸ್ಸು ಕಳುಹಿಸಿದ್ದಾರೆ. ಆದುದರಿಂದ ಮಾನ್ಯ ಸಚಿವರು ಹೇಳುತ್ತಿರುವುದು ಹಸಿ ಸುಳ್ಳಾಗಿದೆ.

**ಅಧ್ಯಕ್ಷರು:** ನನ್ನ ಅನುಮತಿ ಪಡೆದುಕೊಳ್ಳದೇ ಯಾವುದೇ ಸದಸ್ಯರು ಮಾತನಾಡಿದರೂ ಅವರಾಡಿದ ಮಾತುಗಳು ರೆಕಾರ್ಡ್‌ಗೆ ಹೋಗಬಾರದು.

**ಶ್ರೀ ಬಿ. ಸತ್ಯನಾರಾಯಣ:** ಕಳೆದ ಮೂರು ತಿಂಗಳುಗಳಲ್ಲಿ 1380 ನಳ ನೀರು ಯೋಜನೆ. 2337 ಕಿರು ನೀರು ಪೂರೈಕೆ ಯೋಜನೆಯನ್ನು ಪುನಶ್ಚೇತನ ಕಾಮಗಾರಿಗಳಲ್ಲಿ ಕೈಗೊಂಡು, ಸುಮಾರು 4317 ಕೊಳವೆ ಬಾವಿಗಳನ್ನು ಕೊರೆಸಲಾಗಿರುತ್ತದೆ. ಈ ಸಂಬಂಧ ಪಿಡಬ್ಲ್ಯೂಡಿಯಲ್ಲಿ ನಾಲ್ಕಾರು ವರ್ಷಗಳಾದ ಬಳಿಕ ಕಂಟ್ರ್ಯಾಕ್ಟರ್ಸ್‌ಗೆ ಬಿಲ್ ಪೇಮೆಂಟ್ ಮಾಡಿರುವ ಸಂದರ್ಭಗಳನ್ನು ನಾವು ನೋಡುತ್ತಿದ್ದೇವೆ. ಆದರೆ 15 ದಿವಸ, ಎರಡು ತಿಂಗಳು, ಮೂರು ತಿಂಗಳ ಕಾಲ ಹಣ ಕೊಡುವುದಕ್ಕೆ ತಡವಾದರೂ ದುಡ್ಡಿಲ್ಲವೆಂದು ಆರೋಪ ಮಾಡುವುದು ಸರಿಯಲ್ಲ. ಹಾಗಾಗಿ, ದುಡ್ಡು ಕೊಡುವ ಜವಾಬ್ದಾರಿ ಸರ್ಕಾರದ್ದು. ಅವಶ್ಯಕತೆ ಎಲ್ಲಿದೆ, ಎಲ್ಲಿ ತೊಂದರೆಯಾಗಿದೆ, ಎಲ್ಲಿ ಕುಡಿಯುವ ನೀರಿನ ತೊಂದರೆ ನಿವಾರಿಸಬೇಕಾಗಿದೆ, ಅಂತಹ ಕಡೆಗಳಲ್ಲಿ ಕಾರ್ಯಪಡೆ ಕೆಲಸ ಮಾಡುವುದಕ್ಕೆ ನಮ್ಮಿಂದ ಯವುದೇ ರಿತಿಯಲ್ಲೂ ಸರ್ಕಾರದ ವತಿಯಿಂದಾಗಲಿ, ಜಿಲ್ಲಾ ವತಿಯಿಂದಾಗಲಿ ಯಾವುದೇ ಅಡ್ಡಿಯಿರುವುದಿಲ್ಲ. ಇದನ್ನು ನಾನು ಬಹಳ ಸ್ಪಷ್ಟವಾಗಿ ಹೇಳಬಯಸುತ್ತಿದ್ದೇನೆ.

**ಅಧ್ಯಕ್ಷರು:** ಈಗ ಸದನವನ್ನು ಮೂರು ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

**(ಸದನವು ಭೋಜನ ವಿರಾಮಕ್ಕೆ ಮಧ್ಯಾಹ್ನ 1 ಗಂಟೆ 38 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ಮಧ್ಯಾಹ್ನ 3.00 ಗಂಟೆಗೆ ಸೇರಲು ನಿಶ್ಚಯಿಸಿತು)**

**ಸದನವು ಪುನಃ ಮಧ್ಯಾಹ್ನ 3 ಗಂಟೆ 7 ನಿಮಿಷಕ್ಕೆ ಸಮಾವೇಶಗೊಂಡಿತು.**

**(ಸನ್ಮಾನ್ಯ ಅಧ್ಯಕ್ಷರು ಶ್ರೀ ಕೃಷ್ಣರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)**